ಸಂಪುಟ 01 | ಸಂಚಿಕೆ 217 | ಶುಕ್ರವಾರ 03 ಜುಲೈ 2026 | ಪುಟ 4 | ಬೆಲೆ-2 ರೂ.

ಇರ್ಫಾನ್ ಕೆ
ಸಂಪಾದಕರು

M A ವಹಾಬ್
ಪ್ರಧಾನ ಸಂಪಾದಕರು

# ನೈಜ್ಯ ದೆಸೆ

NAIJYA DESE

ಸತ್ಯದ ದಿಕ್ಕು TRUE PATH

ಕನ್ನಡ ದಿನ ಪತ್ರಿಕೆ

ಸಿಂಧನೂರು, ಮಸ್ಕಿ
ಮಾನ್ವಿ, ಲಿಂಗಸೂರು,
ರಾಯಚೂರ,ದೇವದುರ್ಗ
ಬಳ್ಳಾರಿ, ಕೊಪ್ಪಳ
ಯಾದಗಿರಿ, ಕಲಬುರ್ಗಿ,
ಬೀದರ, ವಿಜಯಪುರ.
ಗದಗ, ವಿಜಯನಗರ.
ಏಕಕಾಲಕ್ಕೆ ಪ್ರಕಟಣೆ

REGIONAL KANNADA DAILY MORNING

RNI code: KNKAN/25/A3581 ಮೋ: 9902277588, 9880707587, 9008787586 naijyadese@gmail.com

## ಈ ದಿನದ ವಿಶೇಷ

1) ಅಂತರರಾಷ್ಟ್ರೀಯ ಪ್ಲಾಸ್ಟಿಕ್ ಬ್ಯಾಗ್ ಮುಕ್ತ ದಿನ (International Plastic Bag Free Day): ಪರಿಸರ ಸಂರಕ್ಷಣೆಗಾಗಿ ಸಿಂಗಲ್-ಯೂಸ್ ಪ್ಲಾಸ್ಟಿಕ್ ಬ್ಯಾಗ್‌ಗಳ ಬಳಕೆಯನ್ನು ಕಡಿಮೆ ಮಾಡಲು ಮತ್ತು ಜಾಗೃತಿ ಮೂಡಿಸಲು ಈ ದಿನವನ್ನು ಆಚರಿಸಲಾಗುತ್ತದೆ.

2) ಅಂತರರಾಷ್ಟ್ರೀಯ ಸಹಕಾರ ದಿನ (International Day of Cooperatives): ಸಾಮಾನ್ಯವಾಗಿ ಪ್ರತಿ ವರ್ಷ ಜುಲೈ ತಿಂಗಳ ಮೊದಲ ಶನಿವಾರದಂದು ಈ ದಿನವನ್ನು ಆಚರಿಸಲಾಗುತ್ತದೆ. 2026 ರ ಜುಲೈ 3 ಶುಕ್ರವಾರವಾಗಿದ್ದರೂ, ಸಹಕಾರ ಚಳುವಳಿಯ ಮಹತ್ವವನ್ನು ಸಾರಲು ಜಾಗತಿಕವಾಗಿ ಈ ವಾರದಲ್ಲಿ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗುತ್ತದೆ.

## ಸುಭಾಷಿತ

"ಬದುಕಿನಲ್ಲಿ ಬರುವ ಕಷ್ಟಗಳು ನಿನ್ನನ್ನು ಮುರಿಯಲು ಅಲ್ಲ, ಬದಲಿಗೆ ನಿನ್ನ ಶಕ್ತಿಯನ್ನು ಅರಿಯಲು."

ರವೀಂದ್ರನಾಥ ಟ್ಯಾಗೋರ್

## ಉಸಿರುಗಟ್ಟಿಸುತ್ತಿರುವ ಗ್ಯಾರಂಟಿ ಪರಿಷ್ಕರಣೆ : ಸರ್ಕಾರದ ದಿನಕ್ಕೊಂದು ನಿರ್ಧಾರಕ್ಕೆ ರೋಸಿಹೋದ ಜನ

ನೈಜ್ಯ ದೆಸೆ ನ್ಯೂಸ್

ಬೆಂಗಳೂರು: ರಾಜ್ಯ ಸರ್ಕಾರ ದಿನೇದಿನೇ ಹೊಸದಾಗಿ ಜಾರಿಗೊಳಿಸುತ್ತಿರುವ ನಿಯಮಗಳು, ಕಟ್ಟುಪಾಡು ಗಳು ಜನ ಸಾಮಾನ್ಯರನ್ನು ಉಸಿರು ಗಟ್ಟಿಸಲಾರಂಭಿಸಿವೆ.ವಿಧಾನಸಭೆ ಚುನಾವಣೆಗೂ ಮುನ್ನ ಗೆಲ್ಲಲೇ ಬೇಕು ಎಂಬ ಜಿದ್ದಿಗೆ ಬಿದ್ದು, ಯಾರೂ ಕೇಳದೇ ಇದ್ದರೂ, ಸಾರಿಗೆ ಬಸ್‌ಗಳಲ್ಲಿ ಉಚಿತ ಪ್ರಯಾಣಕ್ಕೆ ಶಕ್ತಿ, 200 ಯೂನಿಟ್ ಉಚಿತ ವಿದ್ಯುತ್‌ನ ಗೃಹಜ್ಯೋತಿ, ಮನೆ ಯಜಮಾನಿಯರಿಗೆ 2 ಸಾವಿರ ರೂ. ಮಾಸಾನದ ಗೃಹಲಕ್ಷ್ಮಿ, 10 ಕೆ.ಜಿ.ಯ ವರೆಗೂ ಉಚಿತ ಅಕ್ಕಿ ನೀಡುವ ಅನ್ನಭಾಗ್ಯ, ವಿದ್ಯಾರ್ಥಿಗಳ ಮಾಸಾಶನದ ಯುವನಿಧಿಯಂತಹ ಭರವಸೆಗಳನ್ನು ಘೋಷಣೆ ಮಾಡಿತ್ತು.

ಈ ಹಿಂದಿನ ಬಿಜೆಪಿ ಸರ್ಕಾರದ ಕೆಲ ನೀತಿಗಳು ಹಾಗೂ ಕಾನೂನು ಸುವ್ಯವಸ್ಥೆಯಂತಹ ಗಂಭೀರ ವಿಚಾರಗಳಿಂದ ಬೇಸತ್ತಿದ್ದ ಜನ, ಪರ್ಯಾಯ ಆಯ್ಕೆಯ ಬಗ್ಗೆ ಚಿಂತನೆ ನಡೆಸಿದ್ದರು. ಅಂತಹ ವೇಳೆ ಜನ-ರಿಗೆ ಆಶಾಗೋಪುರ ತೋರಿಸುವ ಕಾಂಗ್ರೆಸ್‌ನ ಗ್ಯಾರಂಟಿ ಯೋಜನೆಗಳು ಮತ್ತಷ್ಟು ಆಸೆ ಹುಟ್ಟಿಸಿದ್ದವು. ಚುನಾವಣೆಯಲ್ಲಿ ನಿರೀಕ್ಷೆ ಮೀರಿ 135 ಕಾಂಗ್ರೆಸ್ ಶಾಸಕರು ಗೆಲುವು ಕಂಡರು, ಭರ್ಜರಿ ಬಹುಮತದ ಸರ್ಕಾರಕ್ಕೆ




ಹೈಕಮಾಂಡ್‌ನ ಕೃಪಾಶೀರ್ವಾದದಿಂದ ಸಿದ್ದರಾಮಯ್ಯ ಶಾಸಕಾಂಗ ಪಕ್ಷದ ನಾಯಕರಾಗಿ ಆಯ್ಕೆಯಾಗಿ ಮುಖ್ಯಮಂತ್ರಿಯಾದರು.

13 ಬಜೆಟ್‌ಗಳನ್ನು ಮಂಡಿಸಿ ಆರ್ಥಿಕತೆಯ ಮೇಲೆ ಹಿಡಿತ ಹೊಂದಿದ ಸಿದ್ದರಾಮಯ್ಯ, ಯಾವುದೇ ಮುಲಾಜು ನೋಡದೆ, ಸರಳ ವಿಧಾನಗಳ ಮೂಲಕ ಅರ್ಜಿ ಸ್ವೀಕರಿಸಿ ಚುನಾವಣೆಯಲ್ಲಿ ನೀಡಿದ ವಾಗ್ದಾನದಂತೆ ಗ್ಯಾರಂಟಿ ಯೋಜನೆಗಳನ್ನು ಜಾರಿಗೊಳಿಸಿದ್ದರು. 200 ಯೂನಿಟ್ ಉಚಿತ ವಿದ್ಯುತ್ ಎಂಬ ಘೋಷಣೆಯಲ್ಲಿ ಕೊಂಚ ಬದಲಾವಣೆ ಮಾಡಿ, 200 ಯೂನಿಟ್‌ಗಳವರೆಗೂ ಎಂದು ಮಾರ್ಪಡಿಸಿದ್ದನ್ನು ಬಿಟ್ಟರೆ, ಉಳಿದೆಲ್ಲಾ ಗ್ಯಾರಂಟಿಗಳನ್ನು ಚಾಚೂ ತಪ್ಪದೇ ಅನುಷ್ಠಾನಗೊಳಿಸಿದ್ದರು.

ಸುಮಾರು ಎರಡೂವರೆ ವರ್ಷಗಳ ಕಾಲ ಜನರಿಗೆ ಯಾವುದೇ ತಲೆ ನೋವಿಲ್ಲದೆ ಯೋಜನೆಗಳ ಲಾಭ ದೊರೆಕಿತ್ತು. ವಿರೋಧ ಪಕ್ಷಗಳು ಎಷ್ಟೇ ಟೀಕೆ, ಅಪಪ್ರಚಾರ ಮಾಡಿದ್ದರೂ, ಗ್ಯಾರಂಟಿಗಳ ಫಲಾನುಭವಿಗಳು ಮಾತ್ರ ಖುಷಿಯಾಗಿದ್ದರು. ಅಭಿವೃದ್ಧಿ ಕಾರ್ಯಗಳಿಗೆ ಹಣ ಸಿಗುತ್ತಿಲ್ಲ ಎಂದು ಆಡಳಿತ ಪಕ್ಷದ ಶಾಸಕರೇ ಅವಲತ್ತುಕೊಂಡರೂ, ಸಿದ್ದರಾಮಯ್ಯ ತಲೆ ಕೆಡಿಸಿಕೊಂಡಿರಲಿಲ್ಲ, ಗ್ಯಾರಂಟಿಗಳಿಗೆ ಕತ್ತರಿ ಪ್ರಯೋಗ ಮಾಡಿರಲಿಲ್ಲ.

ನಾಯಕತ್ವ ಬದಲಾವಣೆಯಾಗಿ ಡಿ.ಕೆ.ಶಿವಕುಮಾರ್ ಮುಖ್ಯಮಂತ್ರಿಯಾಗುತ್ತಿದ್ದಂತೆ ಹೊಸ ಹೊಸ ನಿಯಮಗಳು, ಕಟ್ಟುಪಾಡುಗಳು ಫಲಾನುಭವಿಗಳನ್ನು ರೇಜಿಗೆ ಹಿಡಿಸಿವೆ. ಈ ಮೊದಲು ಡಿ.ಕೆ.ಶಿವಕುಮಾರ್ ಕೆಪಿಸಿಸಿ ಅಧ್ಯಕ್ಷರಾಗಿದ್ದಾಗಲೇ ಗ್ಯಾರಂಟಿಗಳನ್ನು ಘೋಷಣೆ ಮಾಡಲಾಗಿತ್ತು. ಸಿದ್ದರಾಮಯ್ಯ ಸರ್ಕಾರ ಆರಂಭದಲ್ಲಿ ಗ್ಯಾರಂಟಿಗಳನ್ನು ಅನುಷ್ಠಾನಗೊಳಿಸಲು ಸಮಯಾವಕಾಶ ತೆಗೆದುಕೊಂಡಾಗ, ಇದೇ ಡಿ.ಕೆ.ಶಿವಕುಮಾರ್ ಕುತ್ತಿಗೆ ಮೇಲೆ ಕೂತವರಂತೆ ಒತ್ತಡ ತಂದು ಗ್ಯಾರಂಟಿಗಳ ಅನುಷ್ಠಾನಕ್ಕೆ ಕಾರಣ-ಕರ್ತರಾದರು. ಈಗ ತಮದೇ ನೇತೃತ್ವದ ಸರ್ಕಾರದಲ್ಲಿ ಗ್ಯಾರಂಟಿಗಳ ಫಲಾನುಭವಿಗಳು ಫಜೀತಿಗೊಳಗಾಗುವಂತೆ ಮಾಡುತ್ತಿದ್ದಾರೆ.

ರಾಜ್ಯಾದ್ಯಂತ ಇಂದಿನಿಂದ ಗೃಹಜ್ಯೋತಿಯ ಯೋಜನೆಯ ಮರು ಪರಿಶೀಲನೆ ಶುರುವಾಗಿದೆ. ಫಲಾನುಭವಿಗಳು ಮನೆಯ ದಾಖಲೆ ಪತ್ರ, ಬಾಡಿಗೆ ಅಥ-ವಾ ಭೋಗ್ಯದ ಪತ್ರ, ಪಡಿತರ ಚೀಟಿ, ಆದ-ಾರ್ ಕಾರ್ಡ್, ಮತದಾರರ ಗುರುತಿನ ಚೀಟಿ, ಆದಾಯ ಅಥವಾ ಜಾತಿ ಪ್ರಮಾಣ ಪತ್ರದಂತಹ ದಾಖಲೆಗಳನ್ನು ಮನೆ ಬಾಗಿಲಿಗೆ ಬರುವ ಮೀಟರ್ ರೀಡರ್‌ಗಳಿಗೆ ಹಾಜರು ಪಡಿಸಬೇಕಿದೆ. ಫಲಾನುಭವಿ ಆದಾಯತೆ-ರಿಗೆ ಪಾವತಿದಾರರೇ? ಸರ್ಕಾರಿ ನೌಕರರೇ? ಎಂಬೆಲ್ಲಾ ವಿವರಗಳನ್ನು ಪರಿಶೀಲಿಸುತ್ತಿರುವುದು ನೋಡಿದರೆ ಮುಂದಿನ ದಿನಗಳಲ್ಲಿ

## ವೈದ್ಯರ ದಿನಾಚರಣೆ ಅಂಗವಾಗಿ,ವಿವಿಧ ಆಟೋಟಗಳು,ಮನರಂಜನೆಗೈದ ವೈದ್ಯರು

ನೈಜ್ಯ ದೆಸೆ ನ್ಯೂಸ್

ಮಸ್ಕಿ: ಪಟ್ಟಣದಲ್ಲಿರುವ ಶ್ರೀ ವೀರಶೈವ ವಿದ್ಯಾವರ್ಧಕ ಸಂಘ ಅಡಿಯಲ್ಲಿ ಸ್ಥಾಪಿತವಾಗಿರುವ ಶ್ರೀ ಶಾರದಾ ಆಂಗ್ಲ ಮಾಧ್ಯಮ ಶಾಲಾ ಆವರಣದಲ್ಲಿ ವೈದ್ಯರ ದಿನಾಚರಣೆ ಮಾಡಲಾಯಿತು .ಸ್ಥಳೀಯ ಎಲ್ಲಾ ವೈದ್ಯರಿಗೆ ವಿಶೇಷವಾಗಿ ಆಟಗಳನ್ನು ಮತ್ತು ವಿನೂತನ ಕಾರ್ಯಕ್ರಮವನ್ನು ಆಯೋಜನೆ ಮಾಡಲಾಯಿತು.



ಶ್ರೀ ವೀರಶೈವ ವಿದ್ಯಾವರ್ಧಕದ ಸಂಘದ ಗೌರವಾಧ್ಯಕ್ಷರಾದ ಡಾ.ಮಲ್ಲಿಕಾರ್ಜುನ ಇತ್ಲಿ ಅವರು ಅಧ್ಯಕ್ಷತೆ ವಹಿಸಿದ್ದರು, ಖ್ಯಾತ ವೈದ್ಯರಾದ ಡಾ. ಶಿವಶರಣಪ್ಪ ಇತ್ಲಿ, ಡಾ. ಬಿ ಎಚ್ ದಿವಟರ, ಡಾ.ಮಲ್ಲಿಕಾರ್ಜುನ, ಡಾ.ವಿನೋದ, ಡಾ.ಬಸವರಾಜ್ ದಿವಟರ, ಡಾ.ಆದಪ್ಪ ನಾಯಕ, ಡಾ.ತೇಜಸ್ವಿನಿ ಇತ್ಲಿ, ಡಾ. ಸೌಮ್ಯ ಗುಂಡಳ್ಳಿ, ಡಾ.ಮರಿಸ್ವಾಮಿ ಹಿರೇಮಠ, ಡಾ. ಸಿದ್ದಣ್ಣ ಇತ್ಲಿ, ಡಾ. ನಿವೇದಿತಾ ಇತ್ಲಿ ಡಾ. ಶೋಭಾ ದಿವಟರ್, ಡಾ.ಶ್ರೀದೇವಿ ಹಿರೇಮಠ, ಡಾ.ಪ್ರವೀಣ್ ಸಾನಬಾಳ, ಡಾ. ಅರ್ಚನಾ ಸಾನಬಾಳ, ಡಾ. ಮೌನೇಶ, ಡಾ. ಆರ್ ಬಿಹಿರೇಮಠ್ ಹಾಲಾಪೂರ, ಡಾ ದಾವಲ್ ಸಾಬ, ಡಾ. ಚನಬಸಯ್ಯ ಹಿರೇಮಠ , ಡಾಕ್ಟರ್ ಶಂಸುದೀನ್ ಹಾಗೂ ವಿವಿ ಕಾರ್ಯದರ್ಶಿಯಾದ ಅಮರೇಶ್ ಬ್ಯಾಳಿ, ಶರಣಬಸವ ಸೊಪ್ಪಿಮಠ, ಮಹಾಂತೇಶ್ ಮರಳದ, ಮಲ್ಲಿಕಾರ್ಜುನ್ ಹಿರೇಮಠ, ಶಶಿಕಾಂತ್ ಹರಸೂರ್, ನಾಗರಾಜ್ ಯಂಬಲದ,ನಾಗರಾಜ್ ಬಾಳೆಕಾಯಿ ಮುಖ್ಯ ಗುರು ಪಾರ್ವತಿ ಕೆ ಹಾಗೂ ಶಿಕ್ಷಕರು ಶಾಲಾ ಸಿಬ್ಬಂದಿಗಳು ಇದ್ದರು.

## ನಿಗದಿತ ಅವಧಿಯೊಳಗೆ ಗುಣಮಟ್ಟದ ಕಾಮಗಾರಿ ನಡೆಸಿ: ಆರ್.ಸಿದ್ದನಗೌಡ ತುರವಿಹಾಳ ಸೂಚನೆ

ನೈಜ್ಯ ದೆಸೆ ನ್ಯೂಸ್

ಮಸ್ಕಿ: ಮಸ್ಕಿ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯಲ್ಲಿ ವಿವಿಧ ಇಲಾಖೆಗಳಿಂದ ಕೈಗೊಂಡಿರುವ ಅಭಿವೃದ್ಧಿ ಕಾಮಗಾರಿಗಳಲ್ಲಿ ಗುಣಮಟ್ಟ ಕಾಯ್ದುಕೊಂಡು ಉತ್ತಮ ರೀತಿಯಲ್ಲಿ ಕಾಮಗಾರಿ ನಡೆಸುವಂತೆ ಹಾಗೂ ನಿಗದಿತ ಅವಧಿಗೆ ಕಾಮಗಾರಿಗಳನ್ನು ಮುಗಿಸುವಂತೆ ಕೆಪಿಸಿಸಿ ಎಷ್ಟಿ ಮೋರ್ಚಾ ಪ್ರಧಾನ ಕಾರ್ಯದರ್ಶಿ ಆರ್.ಸಿದ್ದನಗೌಡ ತುರವಿಹಾಳ ಸೂಚಿಸಿದರು.

ಮಸ್ಕಿ ತಾಲೂಕಿನ ರಂಗಾಪೂರು ಗ್ರಾಮದಿಂದ ಗೋನಾಳ ಗ್ರಾಮದವರೆಗೆ 4.90 ಕೋಟಿ ವೆಚ್ಚದಲ್ಲಿ ಬ್ರಿಡ್ಜ್ ಮತ್ತು ಡಾಂಬರೀಕರಣ ರಸ್ತೆ, ಪ್ರಧಾನಮಂತ್ರಿ ಗ್ರಾಮಸಡಕ್ ಯೋಜನೆಯಲ್ಲಿ 4 ಕೋಟಿ ವೆಚ್ಚದ ಮೇರನಾಳ-ನಾಗರಬೆಂಚಿ



**ಮಸ್ಕಿ ವಿಧಾನಸಭಾ ಕ್ಷೇತ್ರದಲ್ಲಿ ವಿವಿಧ ಯೋಜನೆಗಳಾಡಿ ನಡೆಯುತ್ತಿರುವ ಕಾಮಗಾ-ರಿಗಳನ್ನು ಯಾವುದೇ ಇಲಾಖೆ ಅಧಿಕಾರಿಗಳಾಗಲಿ ಗುಣಮಟ್ಟದಿಂದ ಕಾಮಗಾರಿ ನಿರ್ವಹಿಸಿ ಸಾರ್ವಜನಿಕರ ಸದುಪಯೋಗಕ್ಕೆ ಅನುಕೂಲ ಮಾಡಬೇಕು**

ಆರ್ ಸಿದ್ದನಗೌಡ ತುರುವಿಹಾಳ.

ರಸ್ತೆ, 50 ಲಕ್ಷ ವೆಚ್ಚದ ಚಿಕ್ಕಕಡಬೂರು ಗ್ರಾಮದಲ್ಲಿ ಸಿಸಿ ರಸ್ತೆ, 5 ಕೋಟಿ ವೆಚ್ಚದ ಬಳಗಾನೂರು ಮುಖ್ಯ ರಸ್ತೆ ಹಾಗೂ 4.50 ಕೋಟಿ ವೆಚ್ಚದ ಬಳಗಾನೂರು ರಿಂಗ್ ರೋಡ್ ಕಾಮಗಾರಿಗಳನ್ನು ಗುರುವಾರ ಪರಿಶೀಲಿಸಿದ ನಂತರ ಮಾತನಾಡಿದ ಅವರು, ಸಾರ್ವಜನಿಕರಿಗೆ ತೊಂದರೆಯಾಗುವಂತೆ ಮುಖ್ಯ ರಸ್ತೆಗಳ ಕಾಮಗಾರಿಯನ್ನು ವೇಗವಾಗಿ ಮಾಡುವಂತೆ ತಾಕೀತು ಮಾಡಿದರು.

ಜೊತೆಗೆ ಕಾಮಗಾರಿ ನಡೆಯುವ ಸ್ಥಳಕ್ಕೆ ಗುತ್ತಿಗೆದಾರರು ಮತ್ತು ಅಧಿಕಾ-ರಿಗಳು ಆಗಾಗ್ಗೆ ಭೇಟಿ ನೀಡಿ ಕಾಮಗಾರಿಗಳನ್ನು ಪರಿಶೀಲಿಸಬೇಕು. ಅಭಿವೃದ್ಧಿ ಕಾಮಗಾ-ರಿಗಳಲ್ಲಿ ಗುಣಮಟ್ಟ ಕಾಯ್ದುಕೊಳ್ಳುವುದು ಅತ್ಯಗತ್ಯ. ಯಾವುದೇ ಕಾರಣಕ್ಕೂ ಕಾಮಗಾ-ರಿಗಳಲ್ಲಿ ಲೋಪದೋಷಗಳು ಉಂಟಾಗಬಾರದು. ನಿರ್ಮಾಣದ ಗುಣಮಟ್ಟದ ವಿಚಾರದಲ್ಲಿ ರಾಜಿ ಮಾಡಿಕೊಳ್ಳುವ ಪ್ರಶ್ನೆಯೇ ಇಲ್ಲ. ಅಭಿವೃದ್ಧಿ ವಿಷಯದಲ್ಲಿ ರಾಜಕೀಯ ಮಾಡದೆ, ಜನರ ಹಿತಾಸಕ್ತಿಯೇ ನಮಗೆ ಮುಖ್ಯವಾಗಿರಬೇಕು ಎಂದು ಖಡಕ್ಕಾಗಿ ಎಚ್ಚರಿಸಿದರು.

## ಎಲ್ಲರ ಸಹಕಾರ,ಪ್ರೀತಿ ವಿಶ್ವಸದಿಂದ ಅತ್ಯುತ್ತಮ ಸೇವೆ:ಡಾ.ಆದಪ್ಪ ನಾಯಕ

ನೈಜ್ಯ ದೆಸೆ ನ್ಯೂಸ್

ಮಸ್ಕಿ: ಪಟ್ಟಣದಲ್ಲಿರುವ ಗಂಗಾ ಮಕ್ಕಳ ಆಸ್ಪತ್ರೆಯ ಮುಖ್ಯ ವೈದ್ಯರಾದ ಡಾ.ಆದ-ಪ್ಪ ನಾಯಕ ಅವರ ಹುಟ್ಟು ಹಬ್ಬ ಅಂಗವಾಗಿ ಇಂದು ಉಚಿತ ತಪಾಸಣೆ ಶಿಬಿರವು ಪ್ರತಿವರ್ಷದಂತೆ ಈ ವರ್ಷವೂ ಸಹ ಯಶಸ್ವಿಯಾಗಿ ನಡೆಯಿತು.

ಡಾ.ಆದಪ್ಪ ನಾಯಕ ಮಾತನಾಡಿ ನಮ್ಮ ಆಸ್ಪತ್ರೆ ಆರಂಭವಾಗಿ ಮೂರು ವರ್ಷ ಒಂಭತ್ತು ತಿಂಗಳಾಗಿದ್ದು, ಸುಮಾರು ಎಂಬತ್ತುಸಾವಿರ ಮಕ್ಕಳನ್ನು ತಪಾಸಣೆ ಮಾಡಿದ್ದು,ಇದಕ್ಕೆ ಮುಖ್ಯ ಕಾರಣ ಎಲ್ಲರ ಸಹಕಾರ, ಪ್ರೀತಿ ವಿಶ್ವಾಸ ಹಾಗೂ ನಮ್ಮ ಸಿಬ್ಬಂದಿಗಳು ಸಹ ನನ್ನ ಕುಟುಂಬದಂತೆ



ಎಲ್ಲವನ್ನೂ ನೋಡಿಕೊಳ್ಳುತ್ತಾರೆ,ಅವರ ಜವಾಬ್ದಾರಿ ಬಹಳಷ್ಟು ಇದೆ,ಹೀಗಾಗಿ ಪ್ರತಿವರ್ಷ ಸಹ ನನ್ನ ಹುಟ್ಟು ಹಬ್ಬದ ಅಂಗವಾಗಿ ಇಂದು ಮತ್ತು ಮುಂದೆಯೂ ಸಹ ಇನ್ನೂ ಹೆಚ್ಚಿನ ಸೇವೆ ಮಾಡಲು ಇಚ್ಚಿಸುತ್ತೇನೆ ಎಂದು ಹೇಳಿದರು. ಇಂದು ನೂರಾರು ಮಕ್ಕಳಿಗೆ ಉಚಿತವಾಗಿ ತಪಾಸಣೆಗೆ ಒಳಗಾದರು. ಈ ಸಂದರ್ಭದಲ್ಲಿ ಸಿಬ್ಬಂದಿಗಳು,ಆಪ್ತರು,ಬಂಧುಗಳಿಂದ ಹುಟ್ಟುಹಬ್ಬದ ಶುಭಾಶಯಗಳು ತಿಳಿಸಿ ಸಿಹಿ ಹಂಚಿದರು.

## ರೈಲ್ವೆ ಮೇಲ್ಸೇತುವೆ ಲೋಕಾರ್ಪಣೆಯೊಂದಿಗೆ ಬಹು ದಶಕದ ಕನಸು ನನಸು : ಸಂಸದ ಈ.ತುಕಾರಾಂ

ನೈಜ್ಯ ದೆಸೆ ನ್ಯೂಸ್

ಬಳ್ಳಾರಿ / ಕಂಪ್ಲಿ: ಕುಡತಿನಿಯಿಂದ ಸಿದ್ದಮ್ಮನಹಳ್ಳಿ ಮಾರ್ಗದ ಮೂಲಕ ಕುರುಗೋಡಿನ ಐತಿಹಾಸಿಕ ದೊಡ್ಡ ಬಸವೇಶ್ವರ ಸನ್ನಿಧಾನಕ್ಕೆ ಹೋಗಲು ಮತ್ತು ಎರಡು ಪಟ್ಟಣ ಮತ್ತು ಗ್ರಾಮೀಣ ಭಾಗದ ಜನರ ಸುಗಮ ಸಂಚಾರಕ್ಕಾಗಿ ರೈಲ್ವೆ ಮೇಲ್ಸೇತುವೆ ಲೋಕಾರ್ಪಣೆಯೊಂದಿಗೆ ಬಹು ದಶಕದ ಕನಸು ನನಸಾಗಿದೆ ಎಂದು ಸಂಸದ ಈ.ತುಕಾರಾಂ ಹೇಳಿದರು.

ಕುಡತಿನಿ ಪಟ್ಟಣದ ಸಿದ್ದಮ್ಮನಹಳ್ಳಿ ಬಳಿಯಲ್ಲಿ ಸುಮಾರು 62 ಕೋಟಿ ವೆಚ್ಚದಲ್ಲಿ ನಿರ್ಮಾಣಗೊಂಡ ಸುಸಜ್ಜಿತ ರೈಲ್ವೆ ಮೇಲ್ವೇತುವೆಯನ್ನು



ಶಾಸಕಿ ಈ.ಅನ್ನಪೂರ್ಣ ಅವರ ಸಮ್ಮುಖದಲ್ಲಿ ಉದ್ಘಾಟಿಸಿ ಮಾತನಾಡಿ, ಇಲ್ಲಿನ ರೈಲ್ವೆ ಮೇಲ್ವೇತುವೆ ಮಾಡುವದಕ್ಕೆ ಮೊದಲ ಆಧ್ಯತೆ ನೀಡಿ, ಪೂರ್ಣಗೊಳಿಸಲಾಗಿದೆ. ಇದರಿಂದ ಮಾರ್ಗದಲ್ಲಿ ಸಂಚರಿಸಲು ಬಹಳಷ್ಟು ಜನತೆಗೆ ಅನುಕೂಲವಾಗಿದೆ. ಶಾಸಕರ ಅನುದಾನದ ಸುಮಾರು 42 ಲಕ್ಷ ವೆಚ್ಚದಲ್ಲಿ ಕುಡತಿನಿ ಪಟ್ಟಣದ ಮಹಾದ್ವಾರ ನಿರ್ಮಾಣ ಮಾಡಲಾಗುವುದು.

ಜನರ ತೆರಿಗೆ ಹಣವನ್ನು ಅಭಿವೃದ್ಧಿ ಕಾರ್ಯಗಳಿಗೆ ಬಳಕೆ ಮಾಡಲಾಗುವುದು. 38 ಎಕರೆಯಲ್ಲಿ ಸುಮಾರು 240 ಕೋಟಿ ವೆಚ್ಚದಲ್ಲಿ ಮುಂದಿನ 50 ವರ್ಷದಲ್ಲಿ ಮಕ್ಕಳು ಸೇರಿದಂತೆ ಪ್ರತಿಯೊಬ್ಬರಿಗೂ ನೀರಿನ ಸಮಸ್ಯೆ ತಲೆದೋರದಂತೆ ಕುಡತಿನಿ, ವೇಣಿವೀರಾಪುರಕ್ಕೆ ಶಾಶ್ವತ ಕುಡಿಯುವ ನೀರಿನ ಯೋಜನೆ ರೂಪಿಸಲಾಗಿದೆ. ಮುಂದಿನ 3ನೇ ಪುಟಕ್ಕೆ

## ಯುವಕನ ಕಿರುಕುಳ, ಮಾತ್ರೆ ಸೇವಿಸಿ ಆತ್ಮಹತ್ಯೆಗೆ ಯತ್ನಿಸಿದ ಆರೋಗ್ಯ ಸಿಬ್ಬಂದಿ

ನೈಜ್ಯ ದೆಸೆ ನ್ಯೂಸ್

ನಾಲತವಾಡ: ಸ್ಥಳೀಯ ಯುವಕನೋರ್ವ ಕರ್ತವ್ಯಕ್ಕೆ ಅಡ್ಡಿ ಪಡಿಸುವುದಲ್ಲದೆ, ಕಳೆದ ಒಂದು ವರ್ಷದಿಂದ ಉದ್ದೇಶಪೂರ್ವಕವಾಗಿ ನನ್ನ ವಿಡಿಯೋ,ಪೋಟೋ ಚಿತ್ರಿಕರಣ ಮಾಡಿ ಅಧಿಕಾರಿಗಳಿಗೆ ಹರಿ ಬಿಡುತ್ತಿದ್ದಾನೆ ಎಂದು ಸ್ಥಳೀಯ ಸಮುದಾಯ ಆರೋಗ್ಯ ಕೇಂದ್ರದ ಹೊರ ಗುತ್ತಿಗೆ ಮಹಿಳಾ ಸಿಬ್ಬಂದಿಯೋರ್ವರು ಮಂಗಳವಾರ ಆಸ್ಪತ್ರೆಯಲ್ಲೇ ಮಾತ್ರೆಗಳನ್ನು ನುಂಗಿ ಪ್ರಾಣ ಬಿಡಲು ಯತ್ನಿಸಿದ ಘಟನೆ ನಡೆದಿದೆ.

ಬೆಳಿಗ್ಗೆ ಕರ್ತವ್ಯಕ್ಕೆ ಆಗಮಿಸಿದ ಸ್ಥಳೀಯ ಸಿಬ್ಬಂದಿ ಕುಸುಮಾ ಹುಡೇದ ಎಂಬುವರೇ ಮಾತ್ರೆ ಸೇವಿಸಿ ಪ್ರಾಣ ಬಿಡಲು ಯತ್ನಿಸಿದವರು, ತಕ್ಷಣ ಘಟನೆ ಗಮನಿಸಿದ ಸ್ಥಳದಲ್ಲಿದ್ದ ಸಿಬ್ಬಂದಿಗಳು ಮುದ್ದೇಬಿಹಾಳದ ತಾಲ್ಲೂಕಾ ಆಸ್ಪತ್ರೆಗೆ ದಾಖಲಿಸಿ ಚಿಕಿತ್ಸೆಗೆ ಏರ್ಪಾಡು ಮಾಡಿದ್ದಾರೆ.

ಏನಿದು ಘಟನೆ? ಸುಮಾರು ಒಂದು ವರ್ಷದಿಂದಲೂ ಸ್ಥಳೀಯ ಸಾಮಾಜೀಕ




ಹೋರಾಟಗಾರ 2-3 ದಿನಕ್ಕೊಮ್ಮೆ ರಾತ್ರಿ ಹಗಲು ಎನ್ನದೇ ತಾವು ಕರ್ತವ್ಯ ನಿರ್ವಹಿಸುವ ವೇಳೆ ಏಕಾ ಏಕಿ ಬಂದು ವಿಡಿಯೋ ಚಿತ್ರೀಕರಿಸಿ ಸಾಮಾಜಿಕ ಜಾಲ ತಾಣ ಹಾಗೂ ಅಧಿಕಾರಿಗಳಿಗೆ ಹರಿ ಬಿಟ್ಟು ಭಯ ಹುಟ್ಟಿಸುತ್ತಿದ್ದನು, ಕುಸುಮಾ ಅವರನ್ನು ಕೆಲಸದಿಂದ ಬಿಡುಗಡೆ ಮಾಡಬೇಕು ಎಂದು ಹೊರ ಗುತ್ತಿಗೆಯ ಸಂಸ್ಥೆಯವರಿಗೂ ಸಹ ಪತ್ರ ಬರೆದಿದ್ದ,

ಸಂಸ್ಥೆಯವರು ಕುಸುಮಾ ಅವರಿಗೆ ಕೆಲಸದಿಂದ ವಜಾ ಮಾಡಿ ಪತ್ರವೂ ನೀಡಿದ್ದರು. ಅತ್ತ ಮಾತ್ರೆ ನುಂಗಿದ ಘಟನೆ ಹಿಂದಿನ ದಿನವಷ್ಟೇ ಪೋಲೀಯೋ ಲಸಿಕೆ ದಿನವೂ ಬಂದು ವಿನಾಃ ಕಾರಣ ಸಂತ್ರಸ್ತೆ ಕುಸುಮಾ ಕೆಲಸ ಮಾಡುತ್ತಿದ್ದ ವೇಳೆ ವಿಡಿಯೋ ಮಾಡಿದ್ದ ಎನ್ನಲಾಗಿದೆ. ಅತ್ತ ನಾನು 10 ವರ್ಷದಿಂದ ಕೆಲಸ ಮಾಡುತ್ತಿದ್ದೆ ನನ್ನನ್ನು ವಜಾ ಮಾಡುತ್ತಿದ್ದಾರೆ ಎನ್ನುವ ಕಿರುಕುಳಕ್ಕೆ ಬೇಸತ್ತ ಕುಸುಮಾ ಮಾತ್ರೆ ಸೇವನೆ ಮಾಡಿದ್ದಾಳೆ ಎಂದು ಸಂಭಂದಿಕರು ಆರೋಪಸಿದ್ದಾರೆ.

ಪ್ರತಿಭಟನೆ: ಮೇಲಿಂದ ಮೇಲೆ ವಿಡಿಯೋ ಚಿತ್ರೀಕರಣ ಮಾಡುವ ಪರಿಣಾಮ ನಮಗೆ ರಕ್ಷಣೆ ಇಲ್ಲದಂತಾಗಿದೆ, ಎಲ್ಲರ ಕರ್ತವ್ಯಕ್ಕೂ ಸಹ ಅಡಚಣೆ ಉಂಟು ಮಾಡುತ್ತಿದ್ದಾನೆ ನಾವು ಕರ್ತವ್ಯ ಮಾಡಲ್ಲ ಎಂದು ಆಸ್ಪತ್ರೆಯ ಹೊರ ಭಾಗದಲ್ಲಿ ಸಿಬ್ಬಂದಿಗಳು ಪ್ರತಿಭಟನೆ ನಡೆಸಿದರು.

ಅಧಿಕಾರಿಗಳ ಭೇಟಿ: ಘಟನೆಗೆ ಅರಿತ ತಹಶೀಲ್ದಾರ ಕೀರ್ತಿ ಚಾಲಕ, ಟಿಎಚ್‌ಓ ಡಾ.ಸತೀಶ ತಿವಾರಿ, ಪಿಎಸ್‌ಐ ಸಂಜಯ್ ತಿಪ್ಪಾರಡ್ಡಿ, ಆಡಳಿತಾಧಿಕಾರಿ ಡಾ.ಪರಶುರಾಮ ವಡ್ಡರ, ನಗರಾಭಿವೃದ್ಧಿ ಕೋಶ ಯೋಜನಾಧಿಕಾರಿ ಬಿ.ಎ.ಸೌದಾಗರ, ಪ.ಪಂ ಸಿಓ ಪ್ರಶಾಂತ್ ಸಿ. ಕಂದಾಯ ನಿರೀಕ್ಷಕರಾದ ವಿ.ವಿ.ಅಂಬಿಗೇರ ಸಂತ್ರಸ್ತೆ ಕುಟುಂಬಸ್ಥರು ಹಾಗೂ ಸಂಭಂದಿಕರೊಂದಿಗೆ ಸಭೆ ಕರೆದು ಚರ್ಚಿಸಿದ್ದು ಮುಂದಿನ ದಿನಗಳಲ್ಲಿ ಹೀಗಾಗದಂತೆ ಕ್ರಮ ವಹಿಸುತ್ತೇವೆ, ಆರೋಪಿ ಯಾರೇ ಇರಲಿ ತಾವು ಪ್ರಕರಣ ದಾಖಲಿಸಿದರೆ ಬಂಧಿಸುತ್ತೇವೆ ಪ್ರತಿಭಟನೆ ಕೈ ಬಿಡಿ ಎಂದು ಸ್ಥಳದಲ್ಲಿದ್ದ ಅಧಿಕಾರಿಗಳು ಮನವಿ ಮಾಡಿಕೊಂಡ ನಂತರ ಪ್ರತಿಭಟನೆ ಕೈಬಿಡಲಾಯಿತು.

ರಕ್ಷಣೆಗೆ ಒತ್ತಾಯ: ವೀರೇಶ ಆಲಕೊಪ್ಪರ ಎನ್ನುವ ಯುವಕ ವಿನಃ ಕಾರಣ ಆಸ್ಪತ್ರೆಗೆ ಬಂದು ತೊಂದ್ರೆ ಕೊಡುತ್ತಿದ್ದಾನೆ, ಮಹಿಳಾ ಆಯೋಗದ ಅಧ್ಯಕ್ಷೆ ನಾಗಲಕ್ಷ್ಮೀ ಚೌಧರಿ ಅವರ ಹೆಸರು ದುರ್ಬಳಕೆ ಮಾಡುತ್ತಿದ್ದಾನೆ, ಗುತ್ತಿಗೆದಾರ-ರಿಗೆ ಹಾಗೂ ಆರೋಗ್ಯಾಧಿಕಾರಿಗಳಿಗೆ ವಿಡಿಯೋ ಹರಿ ಬಿಟ್ಟು ಹೆದರಿಸುತ್ತಿದ್ದು ನಮ್ಮ ಸೊಸೆ ಸಾವು ಬದುಕಿನ ಮದ್ಯೆ ಹೋರಾಡುತ್ತಿದ್ದಾಳೆ ನ್ಯಾಯ ಕೊಡಿಸಿ ಎಂದು ಬಸವರಾಜ ಹುಡೇದ ಅಧಿಕಾರಿಗಳಿಗೆ ಒತ್ತಾಯಿಸಿದರು.

## ಸಾಹಿತ್ಯ ಸಿಂಚನ

### "ಮನುಷ್ಯ"


ಮನುಷ್ಯನೆಂಬುದು ಅಮೂಲ್ಯ ಜನ್ಮ,
ಮಾನವೀಯತೆಯೇ ಅವನ ಧರ್ಮ.
ಪ್ರೀತಿ, ಕರುಣೆ ಹೃದಯದ ದೀಪ,
ಸತ್ಯದ ಹಾದಿಯೇ ಬದುಕಿನ ರೂಪ.
ನಗುವು ಹಂಚಿದರೆ ಸ್ನೇಹ ಬೆಳೆಯುತ್ತದೆ,
ಸಹಾಯ ಮಾಡಿದರೆ ಮನವು ಅರಳುತ್ತದೆ.
ದುಃಖದಲ್ಲೂ ಧೈರ್ಯ ಕಳೆದುಕೊಳ್ಳದವನು,
ಜೀವನದ ಗೆಲುವು ಸಾಧಿಸುವವನು.
ಹಣ, ಅಧಿಕಾರ ಶಾಶ್ವತವಲ್ಲ,
ಒಳ್ಳೆಯ ಗುಣವೇ ನಿಜವಾದ ಬಲ.
ಕ್ಷಮೆ, ತಾಳ್ಮೆ ಜೀವನದ ಆಭರಣ,
ಪ್ರೀತಿಯೇ ಮಾನವನ ನಿಜವಾದ ಕಾರಣ.
ಸ್ವಾರ್ಥವನ್ನು ಬಿಟ್ಟು ಸೇವೆ ಮಾಡೋಣ,
ಎಲ್ಲರ ಮನದಲ್ಲಿ ಪ್ರೀತಿ ಬಿತ್ತೋಣ.
ಪ್ರಕೃತಿಯನ್ನು ಪ್ರೀತಿಸಿ ಕಾಪಾಡೋಣ,
ಮಾನವೀಯ ಮೌಲ್ಯಗಳನ್ನು ಬೆಳೆಸೋಣ.
ಒಗ್ಗಟ್ಟಿನಿಂದ ಸಮಾಜ ಕಟ್ಟೋಣ,
ಸೌಹಾರ್ದದಿಂದ ದೇಶ ಬೆಳೆಸೋಣ.
ಮಾನವ ಜನ್ಮವನ್ನು ಸಾರ್ಥಕಗೊಳಿಸೋಣ,
ಒಳ್ಳೆಯ ಮನುಷ್ಯರಾಗಿ ಬದುಕೋಣ.

–ಎ ಏನ್ ರಮೇಶ್ ಗುಬ್ಬಿ

## ಉಚಿತ ಆರೋಗ್ಯ ಹಾಗೂ ನೇತ್ರ ತಪಾಸಣಾ ಶಿಬಿರ

ನೈಜ್ಯ ದೆಸೆ ನ್ಯೂಸ್

**ತಾಳಿಕೋಟಿ: ತಾಲೂಕಿನ ಲಿಂಗದಳ್ಳಿ ಗ್ರಾಮದ ಗಣ್ಯರಾದ ದಿವಂಗತ ಬಿ.ಆರ್.ಪಾಟೀಲ(ಲಿಂಗದಳ್ಳಿ) ಇವರ ಪುಣ್ಯ ಸ್ಮರಣೆ ಅಂಗವಾಗಿ ಲೋಟಸ್ ಆಸ್ಪತ್ರೆ ಬೆಳಗಾವಿ, ಅನುಗ್ರಹ ಕಣ್ಣಿನ ಆಸ್ಪತ್ರೆ ವಿಜಯಪುರ,**



ಕರೆಕಲ್ ಆಸ್ಪತ್ರೆ ಮುದ್ದೇಬಿಹಾಳ ಹಾಗೂ ಲಿಂಗದಳ್ಳಿ ಗ್ರಾಮಸ್ಥರ ಸಹಯೋಗದಲ್ಲಿ ಉಚಿತ ನೇತ್ರ, ಎಲುಬು ಕೀಲು ತಪಾಸಣೆ ಹಾಗೂ ಆರೋಗ್ಯ ತಪಾಸಣಾ ಶಿಬಿರ ನಾಳೆ (ಜುಲೈ 4) ಶನಿವಾರ ಹಮ್ಮಿಕೊಳ್ಳಲಾಗಿದೆ. ಅಂ–ದು ಲಿಂಗದಳ್ಳಿ ಗ್ರಾಮದ ಶ್ರೀ ಬಿ.ಆರ್.ಪಾಟೀಲ ಸರಕಾರಿ ಪ್ರಾಥಮಿಕ ಶಾಲೆ ಆವರಣದಲ್ಲಿ ಬೆಳಿಗ್ಗೆ 9–00 ರಿಂದ ಮಧ್ಯಾಹ್ನ 3–00ರವರೆಗೆ ನಡೆಯಲಿರುವ ಈ ಶಿಬಿರದಲ್ಲಿ ವಿಜಯಪುರ ಅನುಗ್ರಹ ಕಣ್ಣಿನ ಆಸ್ಪತ್ರೆ ಮುಖ್ಯಸ್ಥರಾದ ಡಾ.ಪ್ರಭುಗೌಡ ಲಿಂಗದಳ್ಳಿ, ಬೆಳಗಾವಿ ಲೋಟಸ್ ಆಸ್ಪತ್ರೆಯ ಎಲುಬು ಮತ್ತು ಕೀಲು ತಜ್ಞ ಡಾ.ಅನೀಲ ಬ.ಪಾಟೀಲ (ಲಿಂಗದಳ್ಳಿ),ಡಾ.ಅತ್ರೇಶ ಎಂ. ಬಿರಾದಾರ(ತುಂಬುಗಿ), ಮಧುಮೇಹ, ಹೃದಯ ರೋಗ ಮತ್ತು ತೀವ್ರ ನಿಗಾ ಚಿಕಿತ್ಸೆ ತಜ್ಞ ಡಾ. ಬಸನಗೌಡ ಕರೆಕಲ್ ಪಾಟೀಲ ಅವರು ರೋಗಿಗಳ ತಪಾಸಣೆ ನಡೆಸಲಿದ್ದಾರೆ. ಶಿಬಿರದಲ್ಲಿ ನೇತ್ರ ಶಸ್ತ್ರ ಚಿಕಿತ್ಸೆಗೆ ಆಯ್ಕೆಯಾದವರನ್ನು ವಿಜಯಪುರದ ಅನುಗ್ರಹ ಕಣ್ಣಿನ ಆಸ್ಪತ್ರೆಗೆ ಕರೆದುಕೊಂಡು ಹೋಗಿ ಉಚಿತವಾಗಿ ಕಣ್ಣಿನ ಪೊರೆಯ ಶಸ್ತ್ರ ಚಿಕಿತ್ಸೆಯನ್ನು ಮಾಡಿ ಲೆನ್ಸ್ ಅಳವಡಿಸಲಾಗುವುದು. ಸಾರ್ವಜನಿಕರು ಈ ಶಿಬಿರದ ಸದುಪಯೋಗವನ್ನು ಮಾಡಿಕೊಳ್ಳಬೇಕು. ಹೆಚ್ಚಿನ ಮಾಹಿತಿಗಾಗಿ ಮೊ.70192 57215 ಸಂಖ್ಯೆಗೆ ಸಂಪರ್ಕಿಸಬೇಕೆಂದು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ನೈಜ್ಯ ದೆಸೆ
ಕನ್ನಡ ದಿನಪತ್ರಿಕೆಯನ್ನು ತಪ್ಪದೆ ಓದಿರಿ.

## ಜಾಲಹಳ್ಳಿಯಲ್ಲಿ ಕರವೇ ಹೋಬಳಿ ಘಟಕ ವತಿಯಿಂದ ಜಿಲ್ಲಾ ಕರವೇ ಅಧ್ಯಕ್ಷ ವಿನೋದ್ ರೆಡ್ಡಿ ಎಂ. ಅವರ 42ನೇ ಜನ್ಮದಿನಅಂಗವಾಗಿ ಪುಸ್ತಕ ವಿತರಣೆ

ನೈಜ್ಯ ದೆಸೆ ನ್ಯೂಸ್

**ಜಾಲಹಳ್ಳಿ: ಕರ್ನಾಟಕ ರಕ್ಷಣಾ ವೇದಿಕೆ ದೇವದುರ್ಗ ತಾಲೂಕು ಘಟಕ ಹಾಗೂ ಜಾಲಹಳ್ಳಿ ಹೋಬಳಿ ಕರವೇ ಘಟಕದ ಅಧ್ಯಕ್ಷ ತಮ್ಮಣ್ಣ ಹೆರುಂಡಿ ಅವರ ನೇತೃತ್ವದಲ್ಲಿ ಜಿಲ್ಲಾ ಕರವೇ ಅಧ್ಯಕ್ಷರಾದ ವಿನೋದ್ ರೆಡ್ಡಿ ಎಂ. ಅವರ 42ನೇ ಜನ್ಮದಿನದ ಅಂಗವಾಗಿ ಜಾಲಹಳ್ಳಿಯ ಜನತಾ ಕಾಲೋನಿಯ ಸರ್ಕಾರಿ ಕಿರಿಯ ಪ್ರಾಥಮಿಕ ಶಾಲೆಯಲ್ಲಿ ವಿದ್ಯಾರ್ಥಿಗಳಿಗೆ ಪುಸ್ತಕ ಹಾಗೂ ಪೆನ್ ವಿತರಣೆ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಯಿತು.**

ಈ ಸಂದರ್ಭದಲ್ಲಿ ಮಾತನಾಡಿದ ಕರ್ನಾಟಕ ರಕ್ಷಣಾ ವೇದಿಕೆ ದೇವದುರ್ಗ ತಾಲೂಕು ಪ್ರಧಾನ ಕಾರ್ಯದರ್ಶಿ ಗುರುನಾಥ ರೆಡ್ಡಿ ಅವರು, ಜಿಲ್ಲಾ ಅಧ್ಯಕ್ಷರಾದ ವಿನೋದ್ ರೆಡ್ಡಿ ಎಂ. ಅವರು ಕನ್ನಡ ನಾಡು, ನುಡಿ ಹಾಗೂ ನೆಲದ ಹಿತಕ್ಕಾಗಿ



ನಿರಂತರವಾಗಿ ಹೋರಾಟ ನಡೆಸುತ್ತಿದ್ದು, ದೇವರು ಅವರಿಗೆ ಉತ್ತಮ ಆರೋಗ್ಯ, ದೀರ್ಘಾಯುಷ್ಯ ಹಾಗೂ ಇನ್ನಷ್ಟು ಶಕ್ತಿ ನೀಡಲಿ. ಅವರ ಸೇವೆ ರಾಜ್ಯಾದ್ಯಂತ ಇನ್ನಷ್ಟು ಬೆಳಗಲಿ ಎಂದು ಹಾರೈಸಿದರು.

ಕಾರ್ಯಕ್ರಮದಲ್ಲಿ ವಿದ್ಯಾರ್ಥಿಗಳಿಗೆ ಪುಸ್ತಕ ಹಾಗೂ ಪೆನ್‌ಗಳನ್ನು ವಿತರಿಸಿ, ಶಿಕ್ಷಣದ ಮಹತ್ವ ಮತ್ತು ವಿದ್ಯಾಭ್ಯಾಸದ ಅಗತ್ಯತೆಯ ಕುರಿತು ಅರಿವು ಮೂಡಿಸಲಾಯಿತು.

ಈ ಸಂದರ್ಭದಲ್ಲಿ ಕರ್ನಾಟಕ ರಕ್ಷಣಾ ವೇದಿಕೆ ದೇವದುರ್ಗ ತಾಲೂಕು ಪ್ರಧಾನ ಕಾರ್ಯದರ್ಶಿ ಗುರುನಾಥ ರೆಡ್ಡಿ, ಜಾಲಹಳ್ಳಿ ಹೋಬಳಿ ಕರವೇ ಅಧ್ಯಕ್ಷ ತಮ್ಮಣ್ಣ ಹೆರುಂಡಿ, ತಾಲೂಕು ಕರವೇ ಮುಖಂಡ ಬಾಬುಸಾಬ್, ಮುಖಂಡರಾದ ಕಲ್ಯಾಣಪ್ಪ ಬಾಗೂರು, ರಂಗಪ್ಪ ಬಂಡಿ, ಮಲ್ಲು ತೆಗ್ಗೆಳ್ಳಿ, ಕರವೇ ಯುವ ಘಟಕದ ಅಧ್ಯಕ್ಷ ವೆಂಕಟೇಶ್ ಜೇಗರ್ಕಲ್ ಹಾಗೂ ಇತರ ಪದಾಧಿಕಾರಿಗಳು ಉಪಸ್ಥಿತರಿದ್ದರು.

ಕಾರ್ಯಕ್ರಮದಲ್ಲಿ ಶಾಲೆಯ ಮುಖ್ಯಗುರುಗಳು, ಎಸ್‌ಡಿಎಂಸಿ ಅಧ್ಯಕ್ಷ ಖುರ್ಷಿದ್ ಪಟೇಲ್, ಶಾಲೆಯ ಸಿಬ್ಬಂದಿ, ಶಿಕ್ಷಕರು ಹಾಗೂ ವಿದ್ಯಾರ್ಥಿಗಳು ಭಾಗವಹಿಸಿದರು.

## ಜಾಲಹಳ್ಳಿ ನಾಡ ಕಚೇರಿ ಮುಂದೆ ಜುಲೈ 8ರಂದು ಬೃಹತ್ ಪ್ರತಿಭಟನಾ ಧರಣಿ: ಕರ್ನಾಟಕ ದಲಿತ ಸಂಘರ್ಷ ಸಮಿತಿ

ನೈಜ್ಯ ದೆಸೆ ನ್ಯೂಸ್

**ಜಾಲಹಳ್ಳಿ, ದೇವದುರ್ಗ: ವಸತಿ ರಹಿತರಿಗೆ ನಿವೇಶನ, ಭೂ–ರಹಿತರಿಗೆ ಭೂ ಮಂಜೂರಾತಿ ಸೇರಿದಂತೆ ವಿವಿಧ ಜನಪರ ಬೇಡಿಕೆಗಳನ್ನು ಈಡೇರಿಸುವಂತೆ ಒತ್ತಾಯಿಸಿ, ಪ್ರೊ. ಬಿ. ಕೃಷ್ಣಪ್ಪ ಅವರು ಸ್ಥಾಪಿಸಿದ ಕರ್ನಾಟಕ ದಲಿತ ಸಂಘರ್ಷ ಸಮಿತಿ (ರಿ) ರಾಜ್ಯ ಸಮಿತಿಯ ನೇತೃತ್ವದಲ್ಲಿ ಜುಲೈ 8, 2026 (ಬುಧವಾರ) ರಂದು ಜಾಲಹಳ್ಳಿ ನಾಡ ಕಚೇರಿ ಮುಂಭಾಗದಲ್ಲಿ ಬೃಹತ್ ಪ್ರತಿಭಟನಾ ಧರಣಿ ನಡೆಸಲಾಗುವುದು ಎಂದು ಸಂಘಟನೆಯ ಮುಖಂಡರು ತಿಳಿಸಿದ್ದಾರೆ.**

ಈ ಕುರಿತು ತಹಶೀಲ್ದಾರರಿಗೆ ಮನವಿ ಸಲ್ಲಿಸಲಾಗಿದ್ದು, ಬಡವರು ಹಾಗೂ ವಸತಿ ರಹಿತ–ರಿಗೆ ನ್ಯಾಯ ಒದಗಿಸುವಂತೆ ಸರ್ಕಾರವನ್ನು ಆಗ್ರಹಿಸಲಾಗಿದೆ. ಬಗರ್ ಹುಕುಂ ಅರ್ಜಿಗಳ ಮರುಪರಿಶೀಲನೆಗೆ ಒತ್ತಾಯ ದಶಕಗಳಿಂದ ಸರ್ಕಾರಿ ಬಂಜರು ಭೂಮಿಯಲ್ಲಿ ಸಾಗುವಳಿ ಮಾಡಿಕೊಂಡು



ಜೀವನ ನಡೆಸುತ್ತಿರುವ ಭೂ–ರಹಿತ ಬಡವರು ನಮೂನೆ–57ರ ಅಡಿಯಲ್ಲಿ ಸಲ್ಲಿಸಿರುವ ಅರ್ಜಿಗಳನ್ನು ಸೂಕ್ತ ಕಾರಣವಿಲ್ಲದೆ ತಿರಸ್ಕರಿಸಲಾಗಿದೆ. ತಿರಸ್ಕರಿಸಿದ ಅರ್ಜಿಗಳನ್ನು ಮರುಪರಿಶೀಲಿಸಿ ಭೂ ಮಂಜೂರಾತಿ ನೀಡಬೇಕು ಎಂದು ಸಮಿತಿ ಒತ್ತಾಯಿಸಿದೆ.

ವಸತಿ ರಹಿತರಿಗೆ ನಿವೇಶನ ಗ್ರಾಮೀಣ ಹಾಗೂ ಪಟ್ಟಣ ಪ್ರದೇಶಗಳಲ್ಲಿ ನಿವೇಶನಗಳ ಬೆಲೆ ಏರಿಕೆಯಿಂದ ಬಡವರಿಗೆ ಮನೆ ನಿರ್ಮಾಣ ಅಸಾಧ್ಯವಾಗಿದೆ. ಸರ್ಕಾರಿ ಭೂಮಿ ಗುರುತಿಸಿ, ಅದು ಲಭ್ಯವಿಲ್ಲದಿದ್ದರೆ ಖಾಸಗಿ ಭೂಮಿ ಖರೀದಿಸಿ 3040 ಅಳತೆಯ ನಿವೇಶನಗಳನ್ನು ವಿತರಿಸಬೇಕು ಎಂದು ಆಗ್ರಹಿಸಲಾಗಿದೆ.

ಪ್ರಮುಖ ಬೇಡಿಕೆಗಳು ವಸತಿ ರಹಿತರಿಗೆ ನಿವೇಶನ ಹಂಚಿಕೆ. ನಮೂನೆ–57ರಡಿ ಸಲ್ಲಿಸಿದ ಅರ್ಜಿಗಳಿಗೆ ಭೂ ಮಂಜೂರಾತಿ. ಚಿಂಚೋಡಿ ಗ್ರಾಮದ ಸರ್ವೆ ನಂ.123ರ ಸರ್ಕಾರಿ ಭೂಮಿಯನ್ನು ವಸತಿ ನಿವೇಶನಕ್ಕೆ ಮಂಜೂರು ಮಾಡುವುದು. ಚಿಂಚೋಡಿ ಗ್ರಾಮದ ಸರ್ವೆ ನಂ.17 ಹಾಗೂ 51/1ರ ಭೂಮಿಗೆ ಹದ್ದುಬಸ್ತು ಕಾರ್ಯ ಕೈಗೊಳ್ಳುವುದು. ಸರ್ಕಾರಿ, ಅರಣ್ಯ, ಗೋಮಾಳ ಹಾಗೂ ಖಾಸಗಿ ಭೂಮಿಯಲ್ಲಿ ವಾಸಿಸುವ ಕುಟುಂಬಗಳಿಗೆ ಇ–ಸ್ವತ್ತು ನೀಡುವುದು. ಜಾಲಹಳ್ಳಿ?ದೇವದುರ್ಗ ರಸ್ತೆಗೆ ಸಂಪರ್ಕ ಕಲ್ಪಿಸುವ ಬಾಗೂರು ಹಾಗೂ ಹೇರುಂಡಿ ರಸ್ತೆ ಅಭಿವೃದ್ಧಿ. ಬುಂಕಲದೊಡ್ಡಿ ಸರ್ಕಾರಿ ಪ್ರೌಢಶಾಲೆಗೆ ಸಂಪರ್ಕ ರಸ್ತೆ ಹಾಗೂ ವಿದ್ಯುತ್ ವ್ಯವಸ್ಥೆ ಕಲ್ಪಿಸುವುದು. ಜಾಲಹಳ್ಳಿ ವಾರ್ಡ್ 2 ಮತ್ತು 3ರಲ್ಲಿ ರಾಜ–ಕಾಲುವೆ ಹಾಗೂ ಚರಂಡಿಗಳ ಹೂಳೆತ್ತುವುದು.

ವೀರಗೋಟ ದಲಿತ ಕಾಲೋನಿಯಲ್ಲಿ ಡಾ. ಬಿ.ಆರ್. ಅಂಬೇಡ್ಕರ್ ಭವನ ನಿರ್ಮಾಣ ಹಾಗೂ ರುದ್ರಭೂಮಿಗೆ ಸರ್ಕಾರಿ ಭೂಮಿ ಮಂಜೂರು ಮಾಡುವುದು. ಮನವಿ ಸಲ್ಲಿಸಿದವರು ಈ ಸಂದರ್ಭದಲ್ಲಿ ರಾಜ್ಯ ಸಂಘಟನಾ ಸಂಚಾಲಕ ಹನುಮಂತಪ್ಪ ಕಾಕರಗಲ್, ತಾಲೂಕು ಸಂಚಾಲಕ ಶಿವಪ್ಪ ಪಲಕನಮರಡಿ, ಶಿವರಾಜ ಖೋರಿ ಗಣಜಲಿ, ಕ್ರಾಂತಿಕಾರಿ ಹಾಡುಗಾರ ಹೈದರ್ ಅಲಿ ಪಲಕನಮರಡಿ, ರಮೇಶ ಗೋಸ್ಲೆ, ಭೀಮಣ್ಣ ವೀರಗೋಟ, ಯೇಸು ಮಸಿರಕಲ್, ಬೂದೆಪ್ಪ ಮ್ಯಾತ್ರಿ, ನಾಗರಾಜ ಭೇರಿ, ರಂಗಪ್ಪ ನಾಯಕ, ತಿಮ್ಮಣ್ಣಗೌಡ, ಶಿವಪ್ಪ ಕಂಪೂರ್, ರಮೇಶ ಭಾವಿಮನಿ, ಚನ್ನಮ್ಮ, ಪಾರ್ವತಿ, ಸಲೀಂ, ಅಂಜಿನೇಯ್ಯ, ರಮೇಶ ಸೂಗೂರಾಳ ಸೇರಿದಂತೆ ಹಲವು ಮುಖಂಡರು ಹಾಗೂ ಕಾರ್ಯಕರ್ತರು ಉಪಸ್ಥಿತರಿದ್ದರು.

## ಶ್ರೀ ಬಸವೇಶ್ವರ ಸಂಯುಕ್ತ ಪ್ರೌಢಶಾಲೆಯಲ್ಲಿ 'ವಚನ ಪಿತಾಮಹ' ಫ.ಗು. ಹಳಕಟ್ಟಿಯವರ ಜಯಂತಿ ಆಚರಣೆ

ನೈಜ್ಯ ದೆಸೆ ನ್ಯೂಸ್

**ಬಳಗಾನೂರು: ಪಟ್ಟಣದ ಶ್ರೀ ಬಸವೇಶ್ವರ ಸಂಯುಕ್ತ ಪ್ರೌಢಶಾಲೆಯಲ್ಲಿ ಇಂದು 'ವಚನ ಪಿತಾಮಹ' ಫ.ಗು. ಹಳಕಟ್ಟಿಯವರ ಜಯಂತಿಯನ್ನು ಅತ್ಯಂತ ಶ್ರದ್ಧಾ ಭಕ್ತಿಯಿಂದ ಆಚರಿಸಲಾಯಿತು. ಕಾರ್ಯಕ್ರಮದಲ್ಲಿ ಶಾಲೆಯ ಪ್ರಭಾರಿ ಮುಖ್ಯಗುರುಗಳು, ಎಲ್ಲಾ ಶಿಕ್ಷಕ ವೃಂದ ಮತ್ತು ವಿದ್ಯಾರ್ಥಿ ವಿದ್ಯಾರ್ಥಿನಿಯರು ಭಾಗವಹಿಸಿ,**

ಹಳಕಟ್ಟಿಯವರ ಭಾವಚಿತ್ರಕ್ಕೆ ಪುಷ್ಪಾರ್ಚನೆ ಸಲ್ಲಿಸುವ ಮೂಲಕ ಗೌರವ ನಮನಗಳನ್ನು ಅರ್ಪಿಸಿದರು. ಕಾರ್ಯಕ್ರಮದಲ್ಲಿ ಕನ್ನಡ ವಿಷಯ ಶಿಕ್ಷಕಿ ಶ್ರೀಮತಿ ಬೋರಮ್ಮನವರು ಮಾತನಾಡಿ, "ಫ.ಗು. ಹಳಕಟ್ಟಿಯವರು ಅಳಿವಿನ ಅಂಚಿನಲ್ಲಿದ್ದ ಸಾವಿರಾರು ವಚನಗಳನ್ನು ಹುಡುಕಿ, ಸಂಪಾದಿಸಿ, ಮುದ್ರಿಸುವ ಮೂಲಕ ಕನ್ನಡ ಸಾಹಿತ್ಯ ಲೋಕಕ್ಕೆ ನೀಡಿದ ಕೊಡುಗೆ ಅಪಾರ. ವಚನ ಸಾಹಿತ್ಯವನ್ನು ಉಳಿಸಿ ಬೆಳೆಸಲು



ತಮ್ಮ ಜೀವನವನ್ನೇ ಮುಡಿಪಾಗಿಟ್ಟ ಅವರ ಬದುಕು ನಮಗೆಲ್ಲರಿಗೂ ಆದರ್ಶಪ್ರಾಯ" ಎಂದು ಅವರ ಜೀವನ ಚರಿತ್ರೆಯನ್ನು ವಿದ್ಯಾರ್ಥಿಗಳಿಗೆ ವಿವರಿಸಿದರು.

ಶಿಕ್ಷಕರಾದ ಸೋಮಶೇಖರ್ ಅವರು ಮಾತನಾಡುತ್ತಾ, "ಹಳಕಟ್ಟಿಯವರು ಕೇವಲ ಸಾಹಿತ್ಯದ ಸೇವಕರಾಗಿರದೆ, ಶರಣ–ರ ವಿಚಾರಧಾರೆಗಳನ್ನು ಜನಸಾಮಾನ್ಯರಿಗೆ ತಲುಪಿಸಿದ ಸಮಾಜ ಸುಧಾರಕರಾಗಿದ್ದರು. ಅವರ ನಿರಂತರ ಪರಿಶ್ರಮದಿಂದಲೇ ಇಂದು ನಮಗೆ ಸಮೃದ್ಧವಾದ ವಚನ ಸಾಹಿತ್ಯ ಲಭ್ಯವಾಗಿದೆ. ವಿದ್ಯಾರ್ಥಿಗಳು ಇಂತಹ ಮಹನೀಯರ ಆದ–ರ್ಶಗಳನ್ನು ಮೈಗೂಡಿಸಿಕೊಳ್ಳಬೇಕು" ಎಂದು ತಿಳಿಸಿದರು ತದನಂತರ ಶಿಕ್ಷಕರಾದ ಮಲ್ಲಿಕಾರ್ಜುನ ಅವರು ತಮ್ಮ ಭಾಷಣದಲ್ಲಿ, "ವಚನಗಳು ಬದುಕಿನ ದಾರಿ ದೀಪಗಳಾಗಿವೆ. ಫ.ಗು. ಹಳಕಟ್ಟಿಯವರಂತಹ ದಾರ್ಶನಿಕರ ಸೇವೆಯಿಂದಾಗಿಯೇ ಶರಣರ ನೈತಿಕ ಮೌಲ್ಯಗಳು ಇಂದಿನ ತಲೆಮಾರಿಗೆ ತಲುಪುತ್ತಿವೆ. ಯುವ ವಿದ್ಯಾರ್ಥಿಗಳು ವಚನಗಳನ್ನು ಕೇವಲ ಪಠ್ಯವಾಗಿ ಓದದೆ, ಅವುಗಳಲ್ಲಿನ ಸಂದೇಶಗಳನ್ನು ಜೀವನದಲ್ಲಿ ಅಳವಡಿಸಿಕೊಳ್ಳಬೇಕು" ಎಂದು ಕರೆ ನೀಡಿದರು.

ಈ ಸಂದರ್ಭದಲ್ಲಿ ಶಿಕ್ಷಕರಾದ ಬಸವರಾಜ, ಸಂಗಪ್ಪ, ಸಿದ್ಧರಾಮೇಶ, ವೆಂಕಟೇಶ್ ಸೇ–ರಿದಂತೆ ಶಾಲೆಯ ಸಿಬ್ಬಂದಿ ವರ್ಗ ಹಾಗೂ ಹೆಚ್ಚಿನ ಸಂಖ್ಯೆಯಲ್ಲಿ ವಿದ್ಯಾರ್ಥಿಗಳು ಉಪಸ್ಥಿತರಿದ್ದರು.

## ಮಾನ್ವಿಯಲ್ಲಿ ಕಾಂಗ್ರೆಸ್‌ನ ಎಸ್‌ಐಆರ್ ಬಿಎಲ್‌ಎಗಳ ತರಬೇತಿ ಕಾರ್ಯಾಗಾರ

ನೈಜ್ಯ ದೆಸೆ ನ್ಯೂಸ್

**ಮಾನ್ವಿ: ಪ್ರಜಾಪ್ರಭುತ್ವದ ಯಶಸ್ಸಿಗೆ ನಿಖರವಾದ ಮತದಾರರ ಪಟ್ಟಿ ಅತ್ಯಂತ ಅಗತ್ಯವಾಗಿದ್ದು, ಯಾವುದೇ ಅರ್ಹ ಮತದಾರರು ಮತದಾನದ ಹಕ್ಕಿನಿಂದ ವಂಚಿತರಾಗದಂತೆ ಬೂತ್ ಮಟ್ಟದ ಏಜೆಂಟರು (ಬಿಎಲ್‌ಎ) ಜವಾಬ್ದಾರಿಯಿಂದ ಕಾರ್ಯನಿರ್ವಹಿಸಬೇಕು ಎಂದು ಮಾಜಿ ಸಚಿವರು ಹಾಗೂ ವಿಧಾನ ಪರಿಷತ್ ಸದಸ್ಯರಾದ ಎನ್.ಎಸ್. ಬೋಸರಾಜು ಹೇಳಿದರು.**

ಪಟ್ಟಣದ ಖಾದ್ರಿ ಫಂಕ್ಷನ್ ಹಾಲ್‌ನಲ್ಲಿ ಮಾನ್ವಿ ಹಾಗೂ ಸಿರವಾರ ಬ್ಲಾಕ್ ಕಾಂಗ್ರೆಸ್ ವತಿಯಿಂದ ಆಯೋಜಿಸಿದ್ದ ಎಸ್‌ಐಆರ್ (ವಿಶೇಷ ಮತದಾರರ ಪಟ್ಟಿ ಪರಿಷ್ಕರಣೆ) ಕುರಿತು ಬಿಎಲ್‌ಎಗಳಿಗೆ ತರಬೇತಿ ಕಾರ್ಯಾಗಾರವನ್ನು ಉದ್ಘಾಟಿಸಿ ಅವರು ಮಾತನಾಡಿದರು. ಮತದಾರರ ಮನೆಗಳಿಗೆ ಭೇಟಿ ನೀಡಿ ಮಾಹಿತಿ ಸಂಗ್ರಹಿಸಿ, ಅಗತ್ಯ ದಾಖಲೆಗಳೊಂದಿಗೆ ಅರ್ಜಿಗಳನ್ನು ಭರ್ತಿ




ಮಾಡಲು ಸಾರ್ವಜನಿಕರಿಗೆ ಸಹಕಾರ ನೀಡಬೇಕು. ಎಸ್‌ಐಆರ್ ಪ್ರಕ್ರಿಯೆಯಲ್ಲಿ ಜವಾಬ್ದಾರಿಯಿಂದ ಭಾಗವಹಿಸದಿದ್ದರೆ ಪ್ರಜಾಪ್ರಭುತ್ವಕ್ಕೆ ಅಪಾಯ ಎದುರಾಗುವ ಸಾಧ್ಯತೆ ಇದೆ ಎಂದು ಅವರು ಎಚ್ಚರಿಸಿದರು.

ಕಾರ್ಯಾಗಾರದಲ್ಲಿ ಪಾಲ್ಗೊಂಡ ಜಿ. ಕುಮಾರ ನಾಯಕ ಹಾಗೂ ಹಂಪಯ್ಯ ನಾಯಕ ಮಾತನಾಡಿ, ಎಸ್‌ಐಆರ್ ಪ್ರಕ್ರಿಯೆಯು ಪ್ರತಿಯೊಬ್ಬ ಮತದಾರನ ಹಕ್ಕು ರಕ್ಷಣೆಗೆ ಸಂಬಂಧಿಸಿದ್ದು, ಅಗತ್ಯ ದಾಖಲೆಗಳೊಂದಿಗೆ ಎಲ್ಲರೂ ಈ ಪ್ರಕ್ರಿಯೆಯಲ್ಲಿ ಭಾಗವಹಿಸಿ ಪ್ರಜಾಪ್ರಭುತ್ವವನ್ನು ಬಲಪಡಿಸಬೇಕು ಎಂದು ಕರೆ ನೀಡಿದರು. ಮತದಾರರ ಹೆಸರು ಸೇರ್ಪಡೆ, ತಿದ್ದುಪಡಿ, ಸ್ಥಳಾಂತರ ಹಾಗೂ ಹೆಸರು ತೆಗೆದುಹಾಕುವ ಪ್ರಕ್ರಿಯೆಗಳ ಕು–ರಿತು ಸಮಗ್ರ ಮಾಹಿತಿ ನೀಡಿದರು.

ಪ್ರತಿಯೊಬ್ಬ ಬಿಎಲ್‌ಎ ಮತದಾರರ ಪಟ್ಟಿಯಲ್ಲಿರುವ ಲೋಪದೋಷಗಳನ್ನು ಗುರುತಿಸಿ ಸರಿಪಡಿಸಲು ಅಧಿಕಾರಿಗಳೊಂದಿಗೆ ಸಮನ್ವಯ ಸಾಧಿಸಬೇಕು. ಯುವ ಮತದಾರರು, ಮಹಿಳೆಯರು ಹಾಗೂ ಹೊಸದಾಗಿ ಅರ್ಹತೆ ಪಡೆದವರ ಹೆಸರುಗಳನ್ನು ಮತದಾರರ ಪಟ್ಟಿಗೆ ಸೇರಿಸಲು ವಿಶೇಷ ಗಮನ ಹರಿಸಬೇಕು ಎಂದು ನಾಯಕರು ಸಲಹೆ ನೀಡಿದರು.

ತರಬೇತಿ ಕಾರ್ಯಾಗಾರದಲ್ಲಿ ಎಸ್‌ಐಆರ್‌ಗೆ ಸಂಬಂಧಿಸಿದ ಅರ್ಜಿ ನಮೂನೆಗಳ ಭರ್ತಿ, ದಾಖಲೆಗಳ ಪರಿಶೀಲನೆ ಹಾಗೂ ಆನ್‌ಲೈನ್ ಮತ್ತು ಆಫ್‌ಲೈನ್ ಪ್ರಕ್ರಿಯೆಗಳ ಕುರಿತು ಜಿಶಾನ್ ಅಲಿ ಸಿದ್ಧಿಕಿ ಮಾಹಿತಿ ನೀಡಿದರು. ಇದೇ ವೇಳೆ, ಮತದಾರರ ಪಟ್ಟಿಯ 100 ಶೇಕಡಾ ನೋಂದಣಿ ಪೂರ್ಣಗೊಳಿಸಿದ ಬಿಎಲ್–ಎಗಳಿಗೆ ಬಹುಮಾನ ನೀಡಲಾಗುವುದು ಎಂದು ಎನ್.ಎಸ್. ಬೋಸರಾಜು ಘೋಷಿಸಿದರು.

ಕಾರ್ಯಕ್ರಮದಲ್ಲಿ ಕೆಪಿಸಿಸಿ ಉಪಾಧ್ಯಕ್ಷರಾದ ಡಿ.ಎಸ್. ಹುಲಗೇರಿ, ಕೆಪಿಸಿಸಿ ಪ್ರಧಾನ ಕಾರ್ಯದರ್ಶಿಗಳಾದ ಕೆ. ಶಾಂತಪ್ಪ, ರಾಮಣ್ಣ ಇರಬಗೇರಾ, ಮೊಹಮ್ಮದ್ ಶಾಲಂ, ಸೂಗಪ್ಪ ಸಾಹುಕಾರ, ಜಯಣ್ಣ, ಅಬ್ದುಲ್ ಗಫೂರ್ ಸಾಬ್, ಸಿರವಾರ ಬ್ಲಾಕ್ ಅಧ್ಯಕ್ಷ ಚುಕ್ಕಿ, ಅಮರೇಗೌಡ ಹಂಚಿನಾಳ, ಶಿವಕುಮಾರ, ರೇಣುಕಾ ಸಿರವಾರ, ವಿಜಯಲಕ್ಷ್ಮಿ, ಕುರ್ಡಿ ಚಂದ್ರಶೇಖರ್, ಜಯವಂತರಾವ್ ಪತಂಗೆ, ಕಿರಲಿಂಗಪ್ಪ, ಜಿ. ಶಿವಮೂರ್ತಿ, ರುದ್ರಪ್ಪ ಅಂಗಡಿ, ಶಿವಣ್ಣ, ಖಾಲಿದ್ ಗುರು, ರೌಡೂರು ಮಹಾಂತೇಶ ಸ್ವಾಮಿ, ಅಮರೇಶಪ್ಪ, ತಿಪ್ಪಣ್ಣ ಬಾಗಲವಾಡ ಸೇರಿದಂತೆ ಕಾಂಗ್ರೆಸ್ ಪಕ್ಷದ ಮುಖಂಡರು, ಪದಾಧಿಕಾರಿಗಳು, ಕಾರ್ಯಕರ್ತರು ಹಾಗೂ ಬಿಎಲ್‌ಎಗಳು ಉಪಸ್ಥಿತರಿದ್ದರು.

## ಚತುಷ್ಪಥ ರಸ್ತೆ ಕಾಮಗಾರಿ ಸಂಪೂರ್ಣ ಅವೈಜ್ಞಾನಿಕ : ಮಾಜಿ ಶಾಸಕ ರಾಜಾ ವೆಂಕಟಪ್ಪ ನಾಯಕ ಆಕ್ಷೇಪ

ನೈಜ್ಯ ದೆಸೆ ನ್ಯೂಸ್

**ಮಾನ್ವಿ: ಪಟ್ಟಣದಲ್ಲಿ ಕಲ್ಮಲ್ ಕ್ರಾಸ್‌ನಿಂದ ಸಿಂಧನೂರುವರೆಗೆ ನಿರ್ಮಾಣವಾಗುತ್ತಿರುವ ಚತುಷ್ಪಥ ರಸ್ತೆ ಕಾಮಗಾರಿಯನ್ನು ನಿಕಟಪೂರ್ವ ಶಾಸಕ ರಾಜಾ ವೆಂಕಟಪ್ಪ ನಾಯಕ ಅವರು ಸ್ಥಳಕ್ಕೆ ಭೇಟಿ ನೀಡಿ ಪರಿಶೀಲಿಸಿದರು. ಈ ವೇಳೆ ರಸ್ತೆ ಹಾಗೂ ಚರಂಡಿ ಕಾಮಗಾರಿಯಲ್ಲಿ ಕಂಡುಬಂದ ಹಲವು ಲೋಪಗಳನ್ನು ತೋರಿಸಿ ಅಧಿಕಾರಿಗಳು, ಗುತ್ತಿಗೆದಾರರು, ಸ್ಥಳೀಯ ಶಾಸಕರು ಹಾಗೂ ಮಾಜಿ ಸಚಿವರ ವಿರುದ್ಧ ತೀವ್ರ ಅಸಮಾಧಾನ ವ್ಯಕ್ತಪಡಿಸಿದರು.**

ಸಾರ್ವಜನಿಕರ ತೆರಿಗೆ ಹಣದಿಂದ ಕೋಟ್ಯಂತರ ರೂಪಾಯಿ ವೆಚ್ಚದಲ್ಲಿ ರಸ್ತೆ ನಿರ್ಮಾಣ ಮಾಡಲಾಗುತ್ತಿದೆ. ಆದ್ದರಿಂದ ಸಾರ್ವಜನಿಕರ ಹಣವನ್ನು ಸಾರ್ವಜನಿಕರಿಗೆ ಅನುಕೂಲವಾಗುವ ರೀತಿಯಲ್ಲಿ ಖರ್ಚು ಮಾಡಬೇಕು. ಆದರೆ ಇಲ್ಲಿ ನಡೆಯುತ್ತಿರುವ ಕಾಮಗಾರಿಯಲ್ಲಿ ಜನರ ಹಿತಾಸಕ್ತಿಯನ್ನು ಸಂಪೂರ್ಣವಾಗಿ ಕಡೆಗಣಿಸಲಾಗಿದೆ. ಅಧಿಕಾ–ರಿಗಳು ಸ್ಥಳ ಪರಿಶೀಲನೆ ನಡೆಸುತ್ತಿಲ್ಲ, ಗುತ್ತಿಗೆದಾರರು ಮನಬಂದಂತೆ ಕಾಮಗಾರಿ ನಡೆಸುತ್ತಿದ್ದಾರೆ. ಸ್ಥಳೀಯ ಶಾಸಕರು ಹಾಗೂ ಮಾಜಿ ಸಚಿವರು ಕೂಡ ಕಾಮಗಾ–ರಿಯ ಗುಣಮಟ್ಟ ಮತ್ತು ಸಾರ್ವಜನಿಕರ ಸಮಸ್ಯೆಗಳ ಬಗ್ಗೆ ಗಮನಹರಿಸದೇ ಸಂಪೂರ್ಣ ನಿರ್ಲಕ್ಷ್ಯ ವಹಿಸಿದ್ದಾರೆ ಎಂದು ಅವರು ಆರೋಪಿಸಿದರು.

ಕಲ್ಮಲ್ ಕ್ರಾಸ್‌ನಿಂದ ಸಿಂಧನೂರುವರೆಗೆ ನಿರ್ಮಾಣವಾಗುತ್ತಿರುವ ಈ ರಸ್ತೆ ಸಾಮಾನ್ಯ ರಸ್ತೆ



ಅಲ್ಲ. ಇದು ಹೈದರಾಬಾದ್‌ನಿಂದ ಗೋವಾಕ್ಕೆ ಸಂಪರ್ಕ ಕಲ್ಪಿಸುವ ಪ್ರಮುಖ ರಾಜ್ಯಾಂತರ ರಸ್ತೆ ಆಗಿದ್ದು, ಕರ್ನಾಟಕ, ತೆಲಂಗಾಣ ಸೇರಿದಂತೆ ವಿವಿಧ ರಾಜ್ಯಗಳಿಂದ ಸಾವಿರಾರು ವಾಹನಗಳು ಪ್ರತಿನಿತ್ಯ ಇದೇ ರಸ್ತೆಯಲ್ಲಿ ಸಂಚರಿಸುತ್ತವೆ. ಗೋವಾ ಸೇರಿದಂತೆ ವಿವಿಧ ಜಿಲ್ಲೆಗಳು ಹಾಗೂ ಪ್ರಮುಖ ಪಟ್ಟಣಗಳಿಗೆ ಸಂಪರ್ಕ ಕಲ್ಪಿಸುವ ಈ ರಸ್ತೆ ಭವಿಷ್ಯದ ವಾಹನ ದಟ್ಟಣೆಯನ್ನು ಗಮನದಲ್ಲಿಟ್ಟುಕೊಂಡು ವೈಜ್ಞಾನಿಕವಾಗಿ ನಿರ್ಮಾಣವಾಗಬೇಕಿತ್ತು. ಆದ–ರೆ ಯೋಜನೆಯಲ್ಲಿಯೇ ಹಲವಾರು ಲೋಪಗಳು ಕಂಡುಬರುತ್ತಿವೆ ಎಂದು ತಿಳಿಸಿದರು.

ಪಟ್ಟಣದ ಹೊರವಲಯದಲ್ಲಿ ಬೈಪಾಸ್ ರಸ್ತೆ ನಿರ್ಮಾಣ ಮಾಡಿದ್ದರೆ ಭಾರಿ ವಾಹನಗಳ ಸಂಚಾರ ಪಟ್ಟಣದೊಳಗೆ ಪ್ರವೇಶಿಸುವ ಅಗತ್ಯವೇ ಇರಲಿಲ್ಲ. ಬೈಪಾಸ್ ನಿರ್ಮಾಣವಾಗದಿರುವ ಕಾರಣ ಲಾರಿಗಳು, ಕಂಟೇನರ್‌ಗಳು, ಬಸ್‌ಗಳು ಹಾಗೂ ಇತರ ಭಾರಿ ವಾಹನಗಳು ಪಟ್ಟಣದ ಮಧ್ಯಭಾಗದಲ್ಲಿಯೇ ಸಂಚರಿಸುತ್ತಿದ್ದು, ಸಂಚಾರ ದಟ್ಟಣೆ ಹೆಚ್ಚುವುದರ ಜೊತೆಗೆ ಅಪಘಾತಗಳ ಅಪಾಯವೂ ಹೆಚ್ಚಾಗಿದೆ. ಸಾರ್ವಜನಿಕರು, ಶಾಲಾ–ಕಾಲೇಜು ವಿದ್ಯಾರ್ಥಿಗಳು ಹಾಗೂ ವ್ಯಾಪಾರಸ್ಥರು ಪ್ರತಿದಿನ ತೊಂದರೆ ಅನುಭವಿಸುವಂತಾಗಿದೆ. ಇಂತಹ ಪರಿಸ್ಥಿತಿಯಲ್ಲಿಯೂ ಪಟ್ಟಣದೊಳಗೆ ಕಿರಿದಾದ ರಸ್ತೆ ನಿರ್ಮಿಸುತ್ತಿರುವುದು ಯಾವುದೇ ದೂರದೃಷ್ಟಿಯಿಲ್ಲದ ಯೋಜನೆಯಾಗಿದೆ ಎಂದು ಅಸಮಾಧಾನ ವ್ಯಕ್ತಪಡಿಸಿದರು.

ಅಂಬೇಡ್ಕರ್ ವೃತ್ತದ ಮಧ್ಯಭಾಗದಲ್ಲಿಯೇ ಚರಂಡಿ ನಿರ್ಮಿಸಿರುವುದಕ್ಕೆ ತೀವ್ರ ಆಕ್ಷೇಪ ವ್ಯಕ್ತಪಡಿಸಿದ ಅವರು, ಇದೇ ವೃತ್ತದಲ್ಲಿ ಪ್ರತಿವರ್ಷ ಡಾ. ಬಿ.ಆರ್. ಅಂಬೇಡ್ಕರ್ ಜಯಂತಿ ಸೇರಿದಂತೆ ವಿವಿಧ ಜಯಂತಿಗಳು, ರಾಷ್ಟ್ರೀಯ ಹಬ್ಬಗಳು, ಸಾರ್ವಜನಿಕ ಸಭೆಗಳು, ಪ್ರತಿಭಟನೆಗಳು ಹಾಗೂ ಸಾಂಸ್ಕೃತಿಕ ಕಾರ್ಯಕ್ರಮಗಳು ನಡೆಯುತ್ತವೆ. ಇಂತಹ ಪ್ರಮುಖ ಸ್ಥಳದಲ್ಲಿ ರಸ್ತೆಯ ಮಧ್ಯದಲ್ಲಿಯೇ ಚರಂಡಿ ನಿರ್ಮಿಸಿರುವುದು ಸಂಪೂರ್ಣ ಅವೈಜ್ಞಾನಿಕವಾಗಿದೆ. ಚರಂಡಿಯನ್ನು ತೆರವುಗೊಳಿಸಿ ರಸ್ತೆ ಅಗಲವನ್ನು ಹೆಚ್ಚಿಸಬೇಕು ಎಂದು ಒತ್ತಾಯಿಸಿದರು.

ಇದಲ್ಲದೆ, ಈಗಾಗಲೇ ಇದ್ದ ಡಿವೈಡರ್ ತೆರವುಗೊಳಿಸದೆ ಅದರ ಮೇಲೆಯೇ ಹೊಸ ಡಿವೈಡರ್ ನಿರ್ಮಿಸುತ್ತಿರುವುದು, ನೀರು ಸರಾಗವಾಗಿ ಹರಿಯುವ ವ್ಯವಸ್ಥೆಯನ್ನು ಕಡೆಗಣಿಸಿ ಚರಂಡಿ ನಿರ್ಮಿಸಿರುವುದು ಸೇರಿದಂತೆ ಹಲವು ಲೋಪಗಳನ್ನು ಅವರು ಅಧಿಕಾ–ರಿಗಳ ಗಮನಕ್ಕೆ ತಂದರು. ಈ ರೀತಿಯ ಕಾಮಗಾರಿ ಮುಂದಿನ ದಿನಗಳಲ್ಲಿ ಸಾರ್ವಜನಿಕರಿಗೆ ದೊಡ್ಡ ಸಮಸ್ಯೆಯಾಗಿ ಪರಿಣಮಿಸಲಿದೆ ಎಂದು ಎಚ್ಚರಿಸಿದರು.

ಮಾನ್ಯ ಜಿಲ್ಲಾಧಿಕಾರಿಗಳು ಕೂಡಲೇ ಸ್ಥಳಕ್ಕೆ ಭೇಟಿ ಪಟ್ಟಣದಲ್ಲಿ ನಡೆಯುತ್ತಿರುವ ಸಂಪೂರ್ಣ ರಸ್ತೆ ಕಾಮಗಾರಿಯನ್ನು ಕುಲಂಕುಶವಾಗಿ ಪರಿಶೀಲಿಸಬೇಕು. ತಜ್ಞರ ತಂಡದಿಂದ ಕಾಮಗಾರಿಯ ಗುಣಮಟ್ಟ ಪರಿಶೀಲನೆ ನಡೆಸಿ, ಸಾರ್ವಜನಿಕರ ಅಭಿಪ್ರಾಯವನ್ನು ಪಡೆದು ಅಗತ್ಯ ತಿದ್ದುಪಡಿಗಳನ್ನು ಮಾಡಿಸಬೇಕು.

ಸಾರ್ವಜನಿಕರ ಅನುಕೂಲಕ್ಕೆ ತಕ್ಕಂತೆ ವೈಜ್ಞಾನಿಕ ಹಾಗೂ ಗುಣಮಟ್ಟದ ರಸ್ತೆ ನಿರ್ಮಾಣಕ್ಕೆ ತಕ್ಷಣ ಕ್ರಮ ಕೈಗೊಳ್ಳಬೇಕು. ಇಲ್ಲವಾದಲ್ಲಿ ಸಾರ್ವಜನಿಕರೊಂದಿಗೆ ಸೇರಿ ಮುಂದಿನ ದಿನಗಳಲ್ಲಿ ಉಗ್ರ ಹೋರಾಟ ಹಮ್ಮಿಕೊಳ್ಳಲಾಗುವುದು ಎಂದು ನಿಕಟಪೂರ್ವ ಶಾಸಕ ರಾಜಾ ವೆಂಕಟಪ್ಪ ನಾಯಕ ಎಚ್ಚರಿಕೆ ನೀಡಿದರು.

ಈ ಸಂದರ್ಭದಲ್ಲಿ ಜೆಡಿಎಸ್ ಪಕ್ಷದ ತಾಲೂಕು ಅಧ್ಯಕ್ಷ ಈರಣ್ಣ ಮರ್ಲಟ್ಟಿ, ಯುವ ಜನತಾದಳದ ರಾಜ್ಯ ಉಪಾಧ್ಯಕ್ಷರಯ ರಾಜಾ ರಾಮಚಂದ್ರ ನಾಯಕ ದೊರೆ, ಪಕ್ಷದ ವಕ್ತಾರ ನಾಗರಾಜ್ ಭೋಗಾವತಿ, ನಗರ ಘಟಕ ಅಧ್ಯಕ್ಷ ಹೆಚ್.ಮೌನೇಶ್ ಗೌಡ, ಶರಣಪ್ಪ ಗೌಡ ಮದ್ಲಾಪುರ, ಬಾಷಾ ಸಾಬ್, ಮೌಲಾ ಸಾಬ್, ಶರಣಪ್ಪ ಮೇಧಾ, ಹಳ್ಳಪ್ಪ ನಾಯಕ, ವಿಜಯ್ ನಾಯಕ ಕೊಟ್ನೆಕಲ್, ಕೆ.ಸಾಜಿದ್ ಪಾಷಾ, ಯಲ್ಲಪ್ಪ ನಾಯಕ, ಶಿವರಾಮ್ ರೆಡ್ಡಿ ಹೊಸೂರು, ಜಸ್ವಂತ್ ಶೇಟ್, ಉಸ್ಮಾನ್ ಸಾಬ್, ಸೇರಿದಂತೆ ಪಕ್ಷದ ಮುಖಂಡರು ವಿವಿಧ ಘಟಕಗಳ ಪದಾಧಿಕಾರಿಗಳು, ಪಕ್ಷದ ಮುಖಂಡರು ಹಾಗೂ ಕಾರ್ಯಕರ್ತರು ಸೇರಿದಂತೆ ಇನ್ನಿತರರು ಇದ್ದರು.

## ನೇಮಕಾತಿ ಪ್ರಕಟಣೆ

### ನಿಮ್ಹಾನ್ಸ್ ನೇಮಕಾತಿ 2026 ? 1 ಪ್ರೋಗ್ರಾಂ ಮೌಲ್ಯಮಾಪನ ವ್ಯವಸ್ಥಾಪಕ ಹುದ್ದೆಗೆ ವಾಕ್-ಇನ್ ಸಂದರ್ಶನ ಜುಲೈ 1, 2026

ನಿಮ್ಹಾನ್ಸ್ ನೇಮಕಾತಿ 2026: 1 ಪ್ರೋಗ್ರಾಂ ಮೌಲ್ಯಮಾಪನ ವ್ಯವಸ್ಥಾಪಕ ಹುದ್ದೆಗಳಿಗೆ ಅರ್ಜಿ ಸಲ್ಲಿಸಿ. ರಾಷ್ಟ್ರೀಯ ಮಾನಸಿಕ ಆರೋಗ್ಯ ಮತ್ತು ನರ ವಿಜ್ಞಾನ ಸಂಸ್ಥೆ ಜುಲೈ 2026 ರ ನಿಮ್ಹಾನ್ಸ್ ಅಧಿಕೃತ ಅಧಿಸೂಚನೆಯ ಮೂಲಕ ಕಾರ್ಯಕ್ರಮ ಮೌಲ್ಯಮಾಪನ ವ್ಯವಸ್ಥಾಪಕ ಹುದ್ದೆಗಳನ್ನು ಭರ್ತಿ ಮಾಡಲು ಅರ್ಹ ಮತ್ತು ಆಸಕ್ತ ಅಭ್ಯರ್ಥಿಗಳಿಂದ ಅರ್ಜಿಗಳನ್ನು ಆಹ್ವಾನಿಸಿದೆ. ಬೆಂಗಳೂರು – ಕರ್ನಾಟಕ ಸರ್ಕಾರದಲ್ಲಿ ವೃತ್ತಿಜೀವನವನ್ನು ಹುಡುಕುತ್ತಿರುವ ಉದ್ಯೋಗಾಕಾಂಕ್ಷಿಗಳು ಈ ಅವಕಾಶವನ್ನು ಬಳಸಿಕೊಳ್ಳಬಹುದು. ಆಸಕ್ತ ಅಭ್ಯರ್ಥಿಗಳು 09–ಜುಲೈ–2026 ರಂದು ವಾಕ್–ಇನ್–ಸಂದರ್ಶನಕ್ಕೆ ಹಾಜರಾಗಬಹುದು ಅಧಿಕೃತ ವೆಬ್‌ಸೈಟ್: nimhans.ac.in

## ನಿಸ್ವಾರ್ಥತೆಯ ಕಾರುಣ್ಯಾಶ್ರಮದ ಸೇವೆಯ ಜೊತೆ ಗುತ್ತೇದಾರ ಕುಟುಂಬ ಸದಾವಕಾಲವಿರುತ್ತದೆ –ರಾಜೇಶ

ನೈಜ್ಯ ದೆಸೆ ನ್ಯೂಸ್

ಸಿಂಧನೂರು: ತಾಲೂಕಿನ ಕುರುಕುಂದ ಗ್ರಾಮದ ದಿ. ಹನುಮಯ್ಯ ಗುತ್ತೇದಾರ ಅವರ ದ್ವಿತೀಯ ವರ್ಷದ ಪುಣ್ಯರಾದ ಕಾರ್ಯಕ್ರಮವನ್ನು ಸಿಂಧನೂರು ನಗರದ ಕಾರುಣ್ಯ ನೆಲೆ ಹಾಗೂ ವಯಸ್ಕರ ಬುದ್ಧಿಮಾಂದ್ಯ ಆಶ್ರಮದಲ್ಲಿ ಮಹಾಪ್ರಸಾದ ಸೇವೆ ಹಣ್ಣು ಹಂಪಲುಗಳನ್ನು ವಿತರಿಸುವ ಮೂಲಕ ದಿ. ಹನುಮಯ್ಯ ಗುತ್ತೇದಾರ ಅವರ ಭಾವಚಿತ್ರಕ್ಕೆ ವಿಶೇಷ ಪೂಜೆ ಸಲ್ಲಿಸುವ ಮೂಲಕ ಅರ್ಥಪೂರ್ಣವಾಗಿ ನೆರವೇರಿತು.

ಈ ಕಾರ್ಯಕ್ರಮದಲ್ಲಿ ಪ್ರವೀಣ್ ಕುಮಾರ್ ಗುತ್ತೇದಾರ ಅವರಿಗೆ ಕಾರುಣ್ಯ ಆಶ್ರಮದ ವತಿಯಿಂದ ಗೌರವಿಸಿ ಆಶೀರ್ವದಿಸಲಾಯಿತು. ಈ ಕಾರ್ಯಕ್ರಮದಲ್ಲಿ ರಾಜೇಶ ಮಾತನಾಡಿ ಕಾರುಣ್ಯ ಆಶ್ರಮದ ಸೇವೆಯು ಬರೀ ಅನಾಥ ಕ್ಷೇತ್ರದಲ್ಲಿ ಅಲ್ಲದೆ





ಪ್ರತಿಯೊಂದು ಕ್ಷೇತ್ರದಲ್ಲಿಯೂ ಕೂಡ ಸೇವೆ ಸಲ್ಲಿಸುತ್ತಿರುವುದು ನಮ್ಮ ಸಿಂಧನೂರಿಗೆ ಕೀರ್ತಿ ತಂದುಕೊಟ್ಟಿದೆ. ಆಶ್ರಮಕ್ಕೆ ಬರುವ ದಾರಿಗಳು ಒಮ್ಮೆ ಸಹಾಯ ಮಾಡಿ ಹೋಗುತ್ತಾರೆ ಆದರೆ ನಿರಂತರ ದೈನಂದಿನ ಕಾರುಣ್ಯಾಶ್ರಮದ ಬದುಕು ಆಶ್ಚರ್ಯಕರ ಸೇವೆಯಾಗಿದೆ. ಅದೆಷ್ಟೋ ಸಮಾಜ ಸೇವಕರುಗಳಿಗೆ ಪೂರ್ತಿಯಾಗಿ ಕರುಣೆಯ ಕಂಪನವಾಗಿದೆ ಕಾರುಣ್ಯ ಆಶ್ರಮದ ಸೇವಾಕಾರ್ಯ ನಿಸ್ವಾರ್ಥತೆಯ ಕಾರುಣ್ಯಾಶ್ರಮದ ಸೇವೆಯ ಜೊತೆ ಗುತ್ತೇದಾರ ಕುಟುಂಬ ಸದಾವಕಾಲವಿರುತ್ತದೆ.

ಇಂದು ನಮ್ಮ ದಿ.ಹನುಮಯ್ಯ ಗುತ್ತೇದಾರ ಅವರ ಪುಣ್ಯಾರಾಧನೆಯು ಕಾರುಣ್ಯ ಆಶ್ರಮದಲ್ಲಿ ಅರ್ಥಪೂರ್ಣವಾಗಿ ನೆರವೇ–ರಿರುವುದು ನಮಗೂ ಹಾಗೂ ಸಮಾಜಕ್ಕೆ ಉತ್ತಮ ಸಂದೇಶ ನೀಡುವ ಕಾರ್ಯವಾಗಿದೆ. ನಿಜವಾದ ಅನ್ನದಾನವೆಂದರೆ ಇಂತಹ ಸಂಸ್ಥೆಗಳಲ್ಲಿ ಅನ್ನಸಂತರ್ಪಣೆ ಮಾಡಿದರೆ ಆ ಭಗವಂತನ ಪ್ರೀತಿಗೆ ನಾವೆಲ್ಲರೂ ಪಾತ್ರರಾಗಬಹುದು ಎಂದು ಅರ್ಥಪೂರ್ಣವಾಗಿ ಮಾತನಾಡಿದರು. ಈ ಕಾರ್ಯಕ್ರಮದಲ್ಲಿ ಮುಖ್ಯ ಅತಿಥಿಗಳಾಗಿ ಪ್ರವೀಣ್ ಕುಮಾರ್. ಹನುಮಂತ. ಸಚಿನ್. ಮೂಕಯ್ಯ. ವಿರೂಪಾಕ್ಷಿ. ಹನುಮಂತಪ್ಪ ನಿವೃತ್ತ ಎ.ಎಸ್.ಐ. ಅಧಿಕಾರಿಗಳು ಹಾಗೂ ಆಶ್ರಮದ ಕಾರ್ಯಾಧ್ಯಕ್ಷರಾದ ಡಾ.ಚನ್ನಬಸವ ಸ್ವಾಮಿ ಹಿರೇಮಠ ಆಶ್ರಮದ ಸದಸ್ಯರಾದ ಸುಜಾತ ಹಿರೇಮಠ ಆಶ್ರಮದ ಸಿಬ್ಬಂದಿಗಳಾದ ಸುಜಾತ ಮಲದ ಗುಡ್ಡ. ಸಿದ್ದಯ್ಯ ಸ್ವಾಮಿ ಮ–ರಿಯಪ್ಪ ಜ್ಯೋತಿ ಅನೇಕರು ಉಪಸ್ಥಿತರಿದ್ದರು.

## ಸರಕಾರಿ ಸಾರ್ವಜನಿಕ ಆಸ್ಪತ್ರೆಯ ಬಳಿಯ ಬಾರ್ ಅಂಡ್ ರೆಸ್ಟೋರೆಂಟ್ ತೆರವಿಗೆ ದಲಿತ ಸೇನೆ ಒತ್ತಾಯ

ನೈಜ್ಯ ದೆಸೆ ನ್ಯೂಸ್

**ಲಿಂಗಸಗೂರು: ಜು 03 ಪಟ್ಟಣದ ಸರಕಾರಿ ಸಾರ್ವಜನಿಕ ಆಸ್ಪತ್ರೆಯ ಬಳಿ ಬಾರ್ ಅಂಡ್ ರೆಸ್ಟೋರೆಂಟ್ ಇರುವುದ–ರಿಂದ ಕುಡುಕರ ಹಾವಳಿ ಇರುವುದರಿಂದ ಆಸ್ಪತ್ರೆಗೆ ಬರುವ ರೋಗಿಗಳಿಗೆ ಮತ್ತು ತುರ್ತು ವಾಹನಗಳಿ ಬಹಳ ತೊಂದರೆಯಾಗಿದೆ ಕೂಡಲೇ ಬಾರ್ ಅಂಡ್ ರೆಸ್ಟೋರೆಂಟ್ ತೆರವುಗೊಳಿಸ ಬೇಕೆಂದು ಒತ್ತಾಯಿಸಿ ದಲಿತ ಸೇನೆಯ ಮುಖಂಡರು ಅಬಕಾರಿ ಇಲಾಖೆಯ ಇನ್ಸ್ಪೆಕ್ಟರ್ ಲಕ್ಷ್ಮೀದೇವಿ ಇವರಿಗೆ ಮನವಿಯನ್ನು ಸಲ್ಲಿಸಿದರು.**



ಪಟ್ಟಣದ ಸರಕಾರಿ ಆಸ್ಪತ್ರೆಯ ಬಳಿ ಕಾನೂನುಬಾಹಿರವಾಗಿ ಆಸ್ಪತ್ರೆಯ ಮುಂದೆ ವಾಹನಗಳನ್ನು ನಿಲ್ಲಿಸಿ ಮದ್ಯಸೇವಿಸಲು ತೆರಳುವುದ–ರಿಂದ ಆಂಬುಲೆನ್ಸ್ ತುರ್ತು ವಾಹನಗಳು ಆಸತ್ರೆಯೊಳಗೆ ಬರಲು ತೊಂದರೆಯಾಗಿದೆ. ಬಾರ್ ಗಳು ಬೆಳಗ್ಗೆ ತೆರೆದರೂ ಯಾರು ಕೇಳುವವರಿಲ್ಲ ದಂತಾಗಿದೆ. ಆಸ್ಪತ್ರೆಯ ಸುತ್ತಮುತ್ತ ಶಾಂತ ವಾತಾವರಣದ ಬದಲು ಮದ್ಯ ವ್ಯಸನಿಗಳು ಗಲಾಟೆ ಮಾಡುವುದು, ಅವಾಚ್ಯ ಶಬ್ದಗಳ ಬಳಕೆ, ಎಲ್ಲೆಂದರಲ್ಲಿ ಮಲಮೂತ್ರ ವಿಸರ್ಜನೆ, ತ್ಯಾಜ್ಯ ಎಸೆಯುವುದರಿಂದ ಸಾರ್ಜನಿಕರಿಗೆ ತೊಂದರೆಯಾಗುತ್ತಿದೆ. ಕೂಡಲೆ ಅಬಕಾರಿ ಇಲಾಖೆ ಅಧಿಕಾರಿಗಳು ಬಾರ್ ಸ್ಥಳಾಂತರಿಸಬೇಕೆಂದು ಒತ್ತಾಯಿಸಿದರು. ದಲಿತ ಸೇನೆಯ ಮುಖಂಡರಾದ ಜಯಶ್ರೀ , ಬಸವರಾಜ್ ಗೊಸ್ಲೆ , ರಮೇಶ ಮರಗಂಟನಾಳ, ನಾಗರಾಜ ಐದನಾಳ, ವಿಶ್ವನಾಥ ಚಲುವಾದಿ, ಆದಪ್ಪ ಯರಡೋಣೆ, ಲಿಂಗಪ್ಪ, ಇದ್ದರು .

## ಕೆ.ಶಿವನಗೌಡ ನಾಯಕರ 49ನೇ ಹುಟ್ಟುಹಬ್ಬ, ಬಿ.ಗಣೇಕಲ್ ಗ್ರಾಮದಲ್ಲಿ ಆಹ್ವಾನ ಪತ್ರಿಕೆ ವಿತರಣೆ

ನೈಜ್ಯ ದೆಸೆ ನ್ಯೂಸ್

**ಅರಕೇರಾ: ತಾಲೂಕಿನ ಬಿ.ಗಣೇಕಲ್ ಗ್ರಾಮದಲ್ಲಿ ಕೆ.ಎಸ್.ಎನ್. ಸೇವಾ ಸಮಿತಿ ವತಿಯಿಂದ ಜುಲೈ 14ರಂದು ಕವಿತಾಳದಲ್ಲಿ ನಡೆಯಲಿರುವ ಕೆ.ಶಿವನಗೌಡ ನಾಯಕರ 49ನೇ ಹುಟ್ಟು ಹಬ್ಬದ ಅಂಗವಾಗಿ ಸಂಕಲ್ಪ ಸಮಾಗಮದ ಆಹ್ವಾನ ಪತ್ರಿಕೆ ಪ್ರತಿ ಮನೆಗಳಿಗೆ ವಿತರಿಸಲಾಯಿತು.**

ಬಿ.ಜೆ.ಪಿ. ಜಿಲ್ಲಾ ಎಸ್.ಸಿ. ಪ್ರದಾನ ಕಾರ್ಯದರ್ಶಿಯಾದ ಸೀತಾರಾಮ ನಾಯ್ಕ್ ಅವರು ಮಾತನಾಡಿ ಜಿಲ್ಲೆಯ ಸಮಗ್ರ ಅಭಿವೃದ್ಧಿಗಾಗಿ ನೀರಾವರಿ ಹಾಗೂ ನವಲಿ ಜಲಾಶಯ ನಿರ್ಮಾಣ, ತಿಂಥಿ–ಣಿ ಸೇತುವೆ ಸಮೀಪ ಜಲಾಶಯ ನಿರ್ಮಾಣ ಹಾಗೂ ಏಮ್ಸ್ ಮಂಜೂರಾತಿಗಾಗಿ ಸಂಕಲ್ಪ ಸಮಾಗಮದ ಕಾರ್ಯಕ್ರಮವನ್ನು ಕೆ.ಶಿವನಗೌಡ ನಾಯಕ ಸೇವಾ ಸಮಿತಿ ಅವರು ಕವಿತಾಳದಲ್ಲಿ ಹಮ್ಮಿಕೊಂಡಿದ್ದಾರೆ. ಈ ಕಾರ್ಯಕ್ರಮದಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ



ಭಾಗವಹಿಸಿ ಕೆ.ಶಿವನಗೌಡ ನಾಯಕ ಅವ–ರಿಗೆ ಹುಟ್ಟುಹಬ್ಬದ ಶುಭಾಶಯಗಳು ಕೋರುವ ಮೂಲಕ ಸಂಕಲ್ಪ ಸಮಾಗಮದ ಕಾರ್ಯಕ್ರಮಕ್ಕೆ ಶಕ್ತಿ ತುಂಬುವ ಮೂಲಕ ಕಾರ್ಯಕ್ರಮವನ್ನು ಯಶಸ್ವಿಗೊಳಿಸೋಣ ಎಂದು ಹೇಳಿದರು.

ಈ ಸಂದರ್ಭದಲ್ಲಿ ಶರಣಗೌಡ ಮಾಲಿ ಪಾಟೀಲ್ ಮಾಜಿ ಜಿಲ್ಲಾ ಪಂಚಾಯತ್ ಸದಸ್ಯರು, ಶಾಂತಪ್ಪ ಸಾಹು ಅಂಗಡಿ, ಸಯ್ಯದ್ ಸಾಬು, ಹಂಪಣ್ಣ ಪಲ್ಲೇದ್, ಶಿವರಾಜ ಹುಲಿಗುಡ್ಡ, ಸಿದ್ದಪ್ಪ ಗೌಡ ಮಾಲೀ ಪಾಟೀಲ್ ಮಲ್ಲಯ್ಯ ಪೂಜಾರಿ, ಧರ್ಮಣ್ಣ ಪೂಜಾರಿ, ಶಿವರಾಜ ಬಾಬೆ, ಬಾಲಪ್ಪ ಪಂದ್ಯಾನ, ಮಲ್ಲಪ್ಪ ಪಂದ್ಯಾನ, ಸದ್ದಾಂ ಕೆಎಸ್, ಮಲ್ಲಯ್ಯ ದಳವಾಯಿ, ಕಾಶಿನಾಥ ಕೋರಿ, ಅಮರೇಶ ಭೋವಿ, ಎಚ್. ಎಸ್.ನಾಯಕ, ಚನ್ನಪ್ಪ ಪಲ್ಲೇದ್, ರಮೇಶ ಗೊರ್ಲಿ, ಅಂಜಿನೇಯ್ಯ ಅಬಕಾರಿ, ಇಸ್ಮಾಯಿಲ್, ಶಿವು ಗೊರ್ಲಿ, ಬಸವರಾಜ ಗೊರ್ಲಿ, ಗಂಗಪ್ಪ ರಾಠೋಡ, ರಡ್ಡೆಪ್ಪ ರಾಠೋಡ, ಹೇಮಣ್ಣ, ಲೋಕಪ್ಪ, ಗೀನಪ್ಪ ಬಂಗಾರಬಂಡಿ, ಬಂಡಯ್ಯ ಹುಲಿಗುಡ್ಡ ಹಾಗೂ ಇನ್ನಿತರರು ಇದ್ದರು.

## ನ್ಯಾಯಾಲಯಗಳಿಗೆ ಬಂತು ಹುಸಿ ಇ–ಮೇಲ್ ಬಾಂಬ್ ಬೆದರಿಕೆ ಸಂದೇಶ



ನೈಜ್ಯ ದೆಸೆ ನ್ಯೂಸ್

**ಲಿಂಗಸಗೂರು : ಜು, 3 – ರಾಯಚೂರು ಜಿಲ್ಲೆಯ ಒಟ್ಟು ಆರು ನ್ಯಾಯಾಲಯಗಳಿಗೆ ಬುಧವಾರ ಇ–ಮೇಲ್ ಮೂಲಕ ಹುಸಿ ಬಾಂಬ್ ಬೆದರಿಕೆ ಸಂದೇಶ ಬಂದಿದ್ದು, ಭಯದ ವಾತಾವರಣ ನಿರ್ಮಾಣವಾಗಿತ್ತು. ತಕ್ಷಣ ಕಾರ್ಯಪ್ರವೃತ್ತರಾದ ಪೊಲೀಸರು, ಬಾಂಬ್ ನಿಷ್ಕ್ರಿಯ ದಳ, ಶ್ವಾನ ದಳದ ಸಿಬ್ಬಂದಿ ಶೋಧ ಕಾರ್ಯ ನಡೆಸಿದ್ದು, ಯಾವುದೇ ಸ್ಫೋಟಕ ಪತ್ತೆಯಾಗದಿರುವುದು ಆತಂಕ ದೂರ ಮಾಡಿದೆ.**

ರಾಯಚೂರು, ಲಿಂಗಸಗೂರು, ಸಿಂಧನೂರು, ಮಾನ್ವಿ, ದೇವದುರ್ಗ ಹಾಗೂ ಮಸ್ಕಿ ತಾಲೂಕಿನ ನ್ಯಾಯಾಲಯಗಳ ಅಧಿಕೃತ ಇ–ಮೇಲ್ ಐಡಿಗೆ ಬಾಂಬ್ ಬೆದರಿಕೆ ಬಂದಿದೆ. ಕೋರ್ಟ್ ಆವರಣದಲ್ಲಿ ಆರ್ಡಿಎಕ್ಸ್ ಮತ್ತು ಐಇಡಿ ಸ್ಫೋಟಕ ಇರಿಸಲಾಗಿದ್ದು ಶೀಘ್ರದಲ್ಲೇ ಸ್ಫೋಟಗೊಳ್ಳಲಿವೆ. ಕೂಡಲೇ ಎಲ್ಲರನ್ನೂ ಸ್ಥಳಾಂತರಿಸಿ ಎಂಬ ಸಂದೇಶ ಬಂದಿದ್ದರಿಂದ ಆತಂಕ ಮನೆ ಮಾಡಿತ್ತು. ತಕ್ಷಣ ಕಾರ್ಯಪ್ರವೃತ್ತರಾದ ಪೊಲೀಸರು, ಕಲಾಪಗಳನ್ನು ಸ್ಥಗಿತಗೊಳಿಸಿ ನ್ಯಾಯಾಧೀಶರು, ವಕೀಲರು, ಸಿಬ್ಬಂದಿ, ಕಕ್ಷಿದಾರರು ಹಾಗೂ ಸಾರ್ವಜನಿಕರನ್ನು ಕೋರ್ಟ್ ಸಂಕೀರ್ಣದಿಂದ ಸುರಕ್ಷಿತವಾಗಿ ಹೊರಗೆ ಕಳುಹಿಸಿದರು. ಎಸ್ಪಿ ನೇತೃತ್ವದಲ್ಲಿ ಬಾಂಬ್ ನಿಷ್ಕ್ರಿಯ ದಳ, ಶ್ವಾನದಳ, ಅಗ್ನಿಶಾಮಕ ದಳ ಹಾಗೂ ಪೊಲೀಸರು ತೀವ್ರ ಶೋಧ ಕಾರ್ಯಾಚರಣೆ ನಡೆಸಿದ್ದಾರೆ. ನ್ಯಾಯಾಲಯದ ಕೊಠಡಿಗಳು, ವಕೀಲರ ಚೇಂಬರ್, ದಾಖಲೆ ಕೊಠಡಿ, ಪಾರ್ಕಿಂಗ್ ಪ್ರದೇಶ ಸೇರಿದಂತೆ ಮೂಲೆ ಮೂಲೆಯನ್ನು ಪರಿಶೀಲಿಸಲಾಯಿತು. ಬಳಿಕ ಯಾವುದೇ ಸ್ಫೋಟಕ ವಸ್ತುಗಳು ಪತ್ತೆಯಾಗಿಲ್ಲ.

ಇದೊಂದು ಹುಸಿ ಬಾಂಬ್ ಬೆದ–ರಿಕೆ ಎಂದು ದೃಢಪಡಿಸಿದ ನಂತರ ಕಲಾಪ ಪುನರಾರಂಭಿಸಲು ಅನುಮತಿ ನೀಡಲಾಯಿತು. ಸೈಬರ್ ತನಿಖೆ ಚುರುಕು ಬೆದ–ರಿಕೆ ಇ–ಮೇಲ್ ಕಳಿಸಿದವರ ಪತ್ತೆಗೆ ಸೈಬರ್ ಪೊಲೀಸರು ತನಿಖೆ ಆರಂಭಿಸಿದ್ದಾರೆ. ಕಿಡಿಗೇಡಿಗಳು ವಿಪಿಎನ್ ಮತ್ತು ವಿದೇಶಿ ಸರ್ವರ್ ಬಳಸಿ ಇ–ಮೇಲ್ ಕಳಿಸಿರುವ ಶಂಕೆ ಇದ್ದು, ಇ–ಮೇಲ್ ಮೂಲ ಪತ್ತೆಗೆ ತಾಂತ್ರಿಕ ತಂಡ ಕಾರ್ಯಪ್ರವೃತ್ತವಾಗಿದೆ.

ಕಳೆದ 6 ವರ್ಷಗಳಲ್ಲಿ ರಾಜ್ಯಾದ್ಯಂತ 468 ಹುಸಿ ಬಾಂಬ್ ಬೆದ–ರಿಕೆ ಕರೆ, ಇ–ಮೇಲ್‌ಗಳು ಬಂದಿದ್ದು ಬೆಂಗಳೂ–ರಿನಲ್ಲಿ 318 ಪ್ರಕರಣ ದಾಖಲಾಗಿವೆ. ಶಾಲಾ, ಕಾಲೇಜು, ನ್ಯಾಯಾಲಯ, ದೇವಾಲಯಗಳಿಗೆ ಟಾರ್ಗೆಟ್ ಮಾಡಿ ಕಿಡಿಗೇಡಿಗಳು ಹುಸಿ ಬೆದ–ರಿಕೆ ಹಾಕುತ್ತಿದ್ದಾರೆ. ಸಾರ್ವಜನಿಕರು ಯಾವುದೇ ರೀತಿಯಲ್ಲಿ ಆತಂಕಪಡುವ ಅಗತ್ಯವಿಲ್ಲ. ಕಿಡಿಗೇಡಿಗಳ ವಿರುದ್ಧ ಕಠಿಣ ಕ್ರಮ ಕೈಗೊಳ್ಳಲಾಗುವುದು ಎಂದು ಬಲ್ಲ ಪೊಲೀಸ್ ಮೂಲಗಳಿಂದ ತಿಳಿದುಬಂದಿದೆ.

## 1ನೇ ಪುಟದಿಂದ....

ದಿನದಲ್ಲಿ ಕುಡತಿನಿಯಲ್ಲಿ 30 ಹಾಸಿಗೆವುಳ್ಳ ಆಸ್ಪತ್ರೆ ನಿರ್ಮಾಣಕ್ಕೆ ಅನುದಾತ ತರಲಾಗುವುದು. ಕ್ಷೇತ್ರದ ಅಭಿವೃದ್ಧಿ ಜೊತೆಗೆ ಅಖಂಡ ಬಳ್ಳಾರಿ ಜಿಲ್ಲೆಯ ಶ್ರೇಯೋಭಿವೃದ್ಧಿಗೆ ಶ್ರಮಿಸಲಾಗುವುದು ಎಂದರು.

ನಂತರ ಇಲ್ಲಿನ ಏಳುಬೆಂಚಿ ಗ್ರಾಮಕ್ಕೆ ತೆರಳುವ ರೈಲ್ವೆ ಗೇಟ್ ಬಳಿಯಲ್ಲಿ ಕಾಯ್ದಿರಿಸಿರುವ ಜಾಗದಲ್ಲಿ ಸುಮಾರು 3.47 ಕೋಟಿ ಅನುದಾನದಲ್ಲಿ ಘನತ್ಯಾಜ್ಯ ಅಭಿವೃದ್ಧಿ ಕಾಮಗಾರಿಗೆ ಸಂಸದ ಈ.ತುಕಾರಾಂ, ಶಾಸಕಿ ಅನ್ನಪೂರ್ಣ ಶಂಕುಸ್ಥಾಪನೆ ನೆರವೇರಿಸಿದರು. ಈ ಸಂದರ್ಭದಲ್ಲಿ ಬ್ಲಾಕ್ ಅಧ್ಯಕ್ಷ ಏಕಾಂಬ್ರಪ್ಪ, ಕುಡತಿನಿ ಪಟ್ಟಣ ಪಂಚಾಯಿತಿ ಮಾಜಿ ಅಧ್ಯಕ್ಷ ವಿ.ರಾಜಶೇಖರ, ಮುಖ್ಯಾಧಿಕಾರಿ ಶಿವಲಿಂಗಪ್ಪ, ಮುಖಂಡರಾದ ವೆಂಕಟರಮಣಬಾಬು, ಕನ್ನೇರಿ ಪಂಪಾಪತಿ, ಸತ್ಯಪ್ಪ, ವೆಂಕಟೇಶ, ಕಾಮೇಶ್ ಸೇ–ರಿದಂತೆ ಸ್ಥಳೀಯ ಮುಖಂಡರು, ಕಾರ್ಯಕರ್ತರು ಮತ್ತು ವಿವಿಧ ಇಲಾಖೆ ಅಧಿಕಾರಿ ವರ್ಗದವರು ಪಾಲ್ಗೊಂಡಿದ್ದರು.

## ಕರ್ತವ್ಯ ನಿರ್ವಹಿಸುತ್ತರುವ ವೇಳೆ ಅತಿಥಿ ಶಿಕ್ಷಕ ಹೃದಯಘಾತ : ಪರಿಹಾರಕ್ಕೆ ಅತಿಥಿ ಶಿಕ್ಷಕರ ಒತ್ತಾಯ

ನೈಜ್ಯ ದೆಸೆ ನ್ಯೂಸ್

**ಮಸ್ಕಿ: ಕರ್ನಾಟಕ ಶಾಲಾ ಶಿಕ್ಷಣ ಇಲಾಖೆಯ ಅಧೀನದಲ್ಲಿರುವ ಸರ್ಕಾರಿ ಶಾಲೆಯಲ್ಲಿ ಅತಿಥಿ ಶಿಕ್ಷಕರಾಗಿ ಸೇವೆ ಸಲ್ಲಿಸುತ್ತಿದ್ದ ಸಂದರ್ಭದಲ್ಲಿ ಹೃದಯಘಾತವಾಗಿ ಮೃತಪಟ್ಟಿರುವ ವೀರನಗೌಡ ಪಾಟೀಲ್ ಕುಟುಂಬಸ್ಥ–ರಿಗೆ 10 ಪರಿಹಾರ ಧನ ನೀಡಬೇಕೆಂದು ಸರ್ಕಾರಿ ಪ್ರಾಥಮಿಕ ಮತ್ತು ಪ್ರೌಢ ಶಾಲಾ ಅತಿಥಿ ಶಿಕ್ಷಕರ ಸಂಘದಿಂದ ತಹಸೀಲ್ದಾರ್ ಮೂಲಕ ಜಿಲ್ಲಾಧಿಕಾರಿಗಳಿಗೆ ಮನವಿ ಪತ್ರ ಸಲ್ಲಿಸುವ ಮೂಲಕ ಒತ್ತಾಯಿಸಿದರು.**

ಶಾಲೆಯಲ್ಲಿ ಮಕ್ಕಳಿಗೆ ಪಾಠ ಮಾಡುತ್ತಿರುವ ವೇಳೆ ಹೃದಯಘಾತದಿಂದ ಅಕಾಲಿಕವಾಗಿ ಮೃತಪಟ್ಟಿದ್ದು, ಕರ್ತವ್ಯದಲ್ಲಿರುವಾಗಲೆ ಸಂಭವಿಸಿದ ಈ ದುರ್ಘಟನೆಯಿಂದ ಅವರ ಕುಟುಂಬ ತೀವ್ರ ಆರ್ಥಿಕ ಹಾಗೂ ಮಾನಸಿಕ ಸಂಕಷ್ಟಕ್ಕೆ ಸಿಲುಕಿದೆ. ವಿದ್ಯಾರ್ಥಿಗಳ ಭವಿಷ್ಯಕ್ಕಾಗಿ ಪ್ರಾಮಾಣಿಕವಾಗಿ ಸೇವೆ ಸಲ್ಲಿಸುತ್ತಿದ್ದ ಶಿಕ್ಷಕರ ಕುಟುಂಬಕ್ಕೆ ಯಾವುದೇ ಸಾಮಾಜಿಕ ಅಥವಾ ಆರ್ಥಿಕ ಭದ್ರತೆ ಇಲ್ಲದಿರುವುದು ಅತ್ಯಂತ ದುಃಖಕರ




ಸಂಗತಿ. ಮೃತ ಅತಿಥಿ ಶಿಕ್ಷಕರ ಕುಟುಂಬಕ್ಕೆ 10 ಲಕ್ಷ ಪರಿಹಾರ ಧನ ನೀಡಬೇಕೆಂದು ಒತ್ತಾಯಿಸಿದರು.

ಭವಿಷ್ಯದಲ್ಲಿ ಇಂತಹ ದುರ್ಘಟನೆಗಳು ಸಂಭವಿಸಿದ ಸಂದರ್ಭದಲ್ಲಿ ಅತಿಥಿ ಶಿಕ್ಷಕರ ಕುಟುಂಬಗಳಿಗೆ ಸೂಕ್ತ ಆರ್ಥಿಕ ನೆರವು ಹಾಗೂ ಸಾಮಾಜಿಕ ಭದ್ರತೆ ಒದಗಿಸುವ ಶಾಶ್ವತ ಕಲ್ಯಾಣ ಯೋಜನೆಯನ್ನು ಜಾರಿಗೊಳಿಸಬೇಕು. 20 ದಿನಗಳೊಳಗಾಗಿ ಪರಿಹಾರ ಧನ ನೀಡಬೇಕು. ಒಂದು ವೇಳೆ ಸದರಿ ದಿನದೊಳಗೆ ಸರ್ಕಾರ ಯಾವುದೇ ಕ್ರಮ ಕೈಗೊಳ್ಳದೇ ಇದ್ದಲ್ಲಿ ಅತಿಥಿ ಶಿಕ್ಷಕರು ಕಾನೂನಿನ ಚೌಕಟ್ಟಿನೊಳಗೆ ಪ್ರತಿಭಟನೆ ಹಾಗೂ ಕಾನೂನು ಬದ್ಧ ಹೋರಾಟವನ್ನು ನಡೆಸಲು ಅನಿವಾರ್ಯವಾಗುತ್ತದೆ ಎಂದು ಎಚ್ಚರಿಸಿದರು.

**ಬೇಡಿಕೆಗಳು:** ಅತಿಥಿ ಶಿಕ್ಷಕರ ಮಾಸಿಕ ಗೌರವಧನವನ್ನು 25 ರಿಂದ 30 ಸಾವಿರಕ್ಕೆ ಹೆಚ್ಚಿಸಬೇಕು, ಸಮಾನ ಕೆಲಸಕ್ಕೆ ಸಮಾನ ವೇತನ ಜಾರಿಗೊಳಿಸಬೇಕು, ಕರ್ತವ್ಯ ನಿರ್ವಹಣೆ ವೇಳೆಯಲ್ಲಿ ಅಪಘಾತ ಅಥವಾ ಮರಣ ಸಂಭವಿಸಿದರೆ ಅತಿಥಿ ಶಿಕ್ಷಕರ ಅಥವಾ ಅವರ ಕುಟುಂಬಕ್ಕೆ ಸೂಕ್ತ ಪರಿಹಾರ ನೀಡಬೇಕು, 10 ರಿಂದ 15 ಲಕ್ಷ ವಿಮೆ ಸೌಲಭ್ಯಗಳನ್ನು ಒದಗಿಸಬೇಕು, 10 ವರ್ಷ ಅಥವಾ ಅದಕ್ಕಿಂತ ಹೆಚ್ಚು ಸೇವೆ ಸಲ್ಲಿಸಿರುವ ಅತಿಥಿ ಶಿಕ್ಷಕರನ್ನು ಖಾಯಂಗೊಳಿಸಬೇಕು, ಮಹಿಳಾ ಅತಿಥಿ ಶಿಕ್ಷಕಿಯರಿಗೆ ವೇತನ ಸಹಿತ ಪ್ರಸೂತಿ, ವೃತುಶಾನ ರಜೆ ನೀಡಬೇಕು,

ಅತಿಥಿ ಶಿಕ್ಷಕರಿಗೆ ವೇತನ ಸಹಿತ ಸಾಂದರ್ಭಿಕ ರಜೆಯನ್ನು ನೀಡಬೇಕು, ಹಾಗೂ ಮುಂದಿನ ನೇಮಕಾತಿಯಲ್ಲಿ ಅತಿಥಿ ಶಿಕ್ಷಕರ ಸೇವೆಯನ್ನು ಪರಿಗಣಿಸಿ ಖಾಯಂ ಗೊಳಿಸಬೇಕೆಂದು ಬೇಡಿಕೆಗಳನ್ನು ಸಲ್ಲಿಸಿದ್ದಾರೆ. ಈ ಸಂದರ್ಭದಲ್ಲಿ ಎಐಡಿಐಎ ರಾಜ್ಯಾಧ್ಯಕ್ಷ ಶರಣಪ್ಪ ಉದ್ಬಾಳ, ಅಯ್ಯಪ್ಪ ನಾಯಕ , ಯಮನೂರು, ಸುರ್ವಣಪ್ಪ ರಂಗಾಪೂರು, ಮಲ್ಲು, ಸೋಮನಾಥ, ಹನುಮಂತ, ತಿಮ್ಮಣ್ಣ, ಮಲ್ಲಮ್ಮ, ಶಶಿರೇಖಾ, ಮೀನಾಕ್ಷಿ, ಮಂಜುಳಾ, ಪ್ರಿಯಾಂಕ, ಕೋಕಿಲಾ, ಯಲ್ಲಮ್ಮ, ರೇಣುಕಮ್ಮ, ಹಮೀದಾ, ದೇವಮ್ಮ, ಮೇರಿ ಲಕ್ಷ್ಮಿ, ಅಮರೇಶ, ಭೀಮರಾಯ ಸಿದ್ದಯ್ಯ ಹೆಸರೂರು, ಭದ್ರಿ ಕೋಠಾರಿ ಸೇರಿದಂತೆ ಇನ್ನಿತರರಿದ್ದರು.

ನೈಜ್ಯ ದೆಸೆ
ಕನ್ನಡ ದಿನಪತ್ರಿಕೆಯನ್ನು ತಪ್ಪದೆ ಓದಿರಿ.

## "ಅವೈಜ್ಞಾನಿಕ ಅಂಡರ್ ಪಾಸ್ ನಿರ್ಮಾಣಕ್ಕೆ ರೈತರ ವಿರೋಧ"

ನೈಜ್ಯ ದೆಸೆ ನ್ಯೂಸ್

**ಕವಿತಾಳ: 'ಭಾರತಮಾಲಾ ಯೋಜನೆಯಡಿ ಬೆಳಗಾವಿ–ರಾಯಚೂರು ರಾಷ್ಟ್ರೀಯ ಹೆದ್ದಾರಿಯಲ್ಲಿ ಹಿರೇಹಣಿಗಿ ಗ್ರಾಮದ ಬಳಿ ಹಾಯ್ದು ಹೋದ ಹಳೆ ರಸ್ತೆಯಲ್ಲಿ ಅವೈಜ್ಞಾನಿಕ 'ಅಂಡರ್ ಪಾಸ್' ನಿರ್ಮಾಣಕ್ಕೆ ವಿರೋಧ ವ್ಯಕ್ತಪಡಿಸುತ್ತಿರುವ ರೈತರು ಸೇತುವೆ ನಿರ್ಮಿಸಬೇಕು ಎಂದು ಆಗ್ರಹಿಸುತ್ತಿದ್ದಾರೆ.**

'ಗ್ರಾಮದ ಬಸ್ ತಂಗುದಾಣದ ಹತ್ತಿರ ಮಳೆ ನೀರು ಹರಿಯಲು ಹಳೆ ರಾಜ್ಯ ಹೆದ್ದಾ–ರಿಯಲ್ಲಿ ಕೆಳ ಮಟ್ಟದ ಸೇತುವೆ ನಿರ್ಮಿಸಲಾಗಿದೆ. ಇದೀಗ ಅಲ್ಲಿ ಹಾಯ್ದು ಹೋದ ರಾಷ್ಟ್ರೀಯ ಹೆದ್ದಾರಿಯಲ್ಲಿ ಕೆಳ ಮಟ್ಟದಲ್ಲಿ 'ಅಂಡರ್ ಪಾಸ್' ನಿರ್ಮಾಣದಿಂದ ಜಮೀನುಗಳಿಗೆ ಸಂಪರ್ಕಿಸುವ ರಸ್ತೆ ಕಡಿತವಾಗಿ ಕೃಷಿ ಚಟುವಟಿಕೆಗಳಿಗೆ



ಹಿನ್ನಡೆಯಾಗುತ್ತದೆ' ಎನ್ನುವುದು ರೈತರ ಆರೋಪ.

'ಈ ಕುರಿತು ರೈತರು ಸಂಬಂಧಪಟ್ಟ ಇಲಾಖೆಗೆ ಈಗಾಗಲೇ ಲಿಖಿತ ದೂರು ನೀಡಿದ್ದರೂ ಹೆದ್ದಾರಿ ಪ್ರಾಧಿಕಾರದ ಅಧಿಕಾ–ರಿಗಳು ಸ್ಪಂದಿಸುತ್ತಿಲ್ಲ' ಎಂದು ರೈತರು ದೂರುತ್ತಾರೆ. 'ಅಂಡರ್ ಪಾಸ್' ನಿರ್ಮಾಣದಿಂದ ಚಿಕ್ಕಹಣಿಗಿ ಮತ್ತು ಹಿರೇಹಣಿಗಿ ಸೀಮಾ ವ್ಯಾಪ್ತಿಯ ಅಂ–ದಾಜು 5 ಸಾವಿರ ಎಕರೆ ಪ್ರದೇಶದಲ್ಲಿ ವ್ಯವಸಾಯ ಕೈಗೊಳ್ಳುವ ರೈತರಿಗೆ ಸಂಚಾರಕ್ಕೆ ತೊಂದರೆಯಾಗುತ್ತದೆ. ಡೊಣಮರಡಿ, ಮಲ್ಲದಗುಡ್ಡ ಮತ್ತು ಗಂಗಾನಗರ ಕ್ಯಾಂಪ್ (74) ಸಂಪರ್ಕಿಸುವ ರಸ್ತೆ ಬಂದ್ ಆಗುತ್ತದೆ ಅದರಿಂದ ರೈತರು ಸಮಸ್ಯೆ ಎದುರಿಸುವಂತಾಗುತ್ತದೆ' ಎಂದು ರೈತರಾದ ತಿಮ್ಮನಗೌಡ ಪಾಟೀಲ್, ಆದಪ್ಪಗೌಡ ಹೇಳಿದರು.

'ಅಂಡರ್ ಪಾಸ್'ನಿಂದ ಕೇವಲ 180 ಮೀಟರ್ ಹತ್ತಿರದಲ್ಲಿ ಸೇತುವೆ ನಿರ್ಮಿಸಲಾಗಿದೆ. ಅಲ್ಲಿಂದ ರೈತರಿಗೆ ಜಮೀನುಗಳಿಗೆ ಸಂಪರ್ಕಿಸುವ ರಸ್ತೆಗೆ ತಿರುವು ಪಡೆಯಲು ಅವಕಾಶಗಳಿವೆ. ಈ ಬಗ್ಗೆ ಈಗಾಗಲೇ ರೈತರು ನೀಡಿದ ದೂರು ಆಧ–'ರಿಸಿ ಸ್ಥಳ ಪರಿಶೀಲನೆ ಮಾಡಿದ್ದು ಮತ್ತೊಂದು ಸೇತುವೆ ನಿರ್ಮಾಣಕ್ಕೆ ಹೆದ್ದಾರಿ ಪ್ರಾಧಿಕಾರ ಅವಕಾಶ ಕಲ್ಪಿಸುವುದು ಕಷ್ಟಸಾಧ್ಯ' ಎಂದು ಹೆದ್ದಾರಿ ಗುತ್ತಿಗೆ ಪಡೆದ ಕಂಪನಿಯ ಸಹಾಯಕ ವ್ಯವಸ್ಥಾಪಕ ಭೀಮರಾವ್ ತಿಳಿಸಿದರು.

'ಅಂಡರ್ ಪಾಸ್' ಬದಲಿಗೆ ಸೇತುವೆ ನಿರ್ಮಾಣ ಮಾಡುವಂತೆ ಜಿಲ್ಲಾಧಿಕಾರಿ, ಉಪ ವಿಭಾಗಾಧಿಕಾರಿಗೆ ಮನವಿ ಸಲ್ಲಿಸಲಾಗಿದೆ. ಕ್ರಮ ವಹಿಸದಿದ್ದರೆ ಪ್ರತಿಭಟನೆ ನಡೆಸಲಾಗುವುದು. –: ತಿಮ್ಮನಗೌಡ ಪಾಟೀಲ್ ಹಿರೇಹಣಿಗಿ ರೈತ

ಹೆದ್ದಾರಿ ಪ್ರಾಧಿಕಾರದ ಯೋಜನೆಯಂತೆ ರಸ್ತೆ ಮತ್ತು ಸೇತುವೆ ನಿರ್ಮಿಸಲಾಗುತ್ತಿದೆ. ಕಡಿಮೆ ಅಂತರದಲ್ಲಿ ಎರಡು ಸೇತುವೆ ನಿರ್ಮಾಣಕ್ಕೆ ಅವಕಾಶವಿಲ್ಲ.

## ಶಿಕ್ಷಣ ಮಾರ್ಗದರ್ಶಿ ವಿಶೇಷ

### ಬಿ.ಆರ್ಚ್ (B.Arch - Bachelor of Architecture)

ಎನ್ನುವುದು 5 ವರ್ಷಗಳ ವೃತ್ತಿಪರ ಪದವಿ ಕೋರ್ಸ್ ಆಗಿದೆ. ಇದು ಕಟ್ಟಡಗಳು, ಮನೆಗಳು ಮತ್ತು ಸಾರ್ವಜನಿಕ ಸ್ಥಳಗಳ ವಿನ್ಯಾಸ ಮತ್ತು ನಿರ್ಮಾಣದ ಕುರಿತು ಪ್ರಾಯೋಗಿಕ ಮತ್ತು ಸೈದ್ಧಾಂತಿಕ ತರಬೇತಿಯನ್ನು ನೀಡುತ್ತದೆ. ಕಲಾತ್ಮಕ ಆಸಕ್ತಿ ಮತ್ತು ಎಂಜಿನಿಯರಿಂಗ್ ಕೌಶಲ್ಯ ಹೊಂದಿರುವ ವಿದ್ಯಾರ್ಥಿಗಳಿಗೆ ಇದು ಅತ್ಯುತ್ತಮ ಕೋರ್ಸ್ ಆಗಿದೆ.ಕೋರ್ಸ್‌ನ ವಿವರಗಳು1. ಅರ್ಹತೆ (Eligibility)ವಿದ್ಯಾರ್ಥಿಯು ಪಿಯುಸಿ ಅಥವಾ 10+2 ತರಗತಿಯಲ್ಲಿ ಕಡ್ಡಾಯವಾಗಿ ಭೌತಶಾಸ್ತ್ರ, ರಸಾಯನಶಾಸ್ತ್ರ ಮತ್ತು ಗಣಿತ (PCM) ವಿಷಯಗಳನ್ನು ಓದಿರಬೇಕು. ಗಣಿತ ವಿಷಯದಲ್ಲಿ ಕನಿಷ್ಠ ಶೇಕಡಾ 50% ಅಂಕಗಳನ್ನು ಪಡೆದಿರಬೇಕು.ಪ್ರವೇಶಕ್ಕಾಗಿ ಓಂಖಿಂ (National Aptitude Test in Architecture) ಅಥವಾ ಎಇಇ ಒಚುಟಿ (Paper-2) ಪರೀಕ್ಷೆಗಳಲ್ಲಿ ಅರ್ಹತೆ ಪಡೆಯುವುದು ಕಡ್ಡಾಯ.2. ಕೋರ್ಸ್ ಅವಧಿ ಮತ್ತು ರಚನೆಅವಧಿ: ಇದು 5 ವರ್ಷಗಳ ಕೋರ್ಸ್ ಆಗಿದ್ದು, ಇದನ್ನು ಒಟ್ಟು 10 ಸೆಮಿಸ್ಟರ್‌ಗಳಾಗಿ ವಿಂಗಡಿಸಲಾಗಿದೆ.ಪಠ್ಯಕ್ರಮ: ವಾಸ್ತುಶಿಲ್ಪ ವಿನ್ಯಾಸ (Architectural Design), ಕಟ್ಟಡ ನಿರ್ಮಾಣ, ರಚನಾತ್ಮಕ ವಿನ್ಯಾಸ (Structural Design), ಇತಿಹಾಸ ಮತ್ತು ಕಂಪ್ಯೂಟರ್ ಆಧಾರಿತ ವಿನ್ಯಾಸ (CAD, BIM) ಗಳನ್ನು ಒಳಗೊಂಡಿರುತ್ತದೆ.ಇಂಟರ್ನ್‌ಶಿಪ್: 5 ವರ್ಷಗಳ ಅವಧಿಯಲ್ಲಿ ವಿದ್ಯಾರ್ಥಿಗಳು ಕಡ್ಡಾಯವಾಗಿ ವೃತ್ತಿಪರ ಇಂಟರ್ನ್‌ಶಿಪ್ (Internship) ಅಥವಾ ಪ್ರಾಯೋಗಿಕ ತರಬೇತಿಯನ್ನು ಪಡೆಯಬೇಕಾಗುತ್ತದೆ.3. ವೃತ್ತಿ ಅವಕಾಶಗಳು (Career Scope)ಈ ಕೋರ್ಸ್ ಪೂರ್ಣಗೊಳಿಸಿದ ನಂತರ ನೀವು ಪಡೆಯಬಹುದಾದ ಉದ್ಯೋಗಗಳು:ಆರ್ಕಿಟೆಕ್ಟ್ (Architect)ಇಂಟೀರಿಯರ್ ಡಿಸೈನರ್ (Interior Designer)ಅರ್ಬನ್ ಪ್ಲಾನರ್ (Urban Planner)ಪ್ರಾಜೆಕ್ಟ್ ಮ್ಯಾನೇಜರ್ (Project Manager)4. ಕರ್ನಾಟಕದಲ್ಲಿರುವ ಪ್ರಮುಖ ಸಂಸ್ಥೆಗಳುಕರ್ನಾಟಕದಲ್ಲಿ ಬಿ.ಆರ್ಚ್ ಕೋರ್ಸ್ ನೀಡುವ ಕೆಲವು ಪ್ರಸಿದ್ಧ ಕಾಲೇಜುಗಳು:BMS ಕಾಲೇಜ್ ಆಫ್ ಇಂಜಿನಿಯರಿಂಗ್, ಬೆಂಗಳೂರುಖಿಗಿ ಕಾಲೇಜ್ ಆಫ್ ಆರ್ಕಿಟೆಕ್ಚರ್, ಬೆಂಗಳೂರುM.S. ರಾಮಯ್ಯ ಇನ್‌ಸ್ಟಿಟ್ಯೂಟ್ ಆಫ್ ಟೆಕ್ನಾಲಜಿ, ಬೆಂಗಳೂರುಮಲಿಕ್ ಸ್ಯಾಂಡಲ್ ಇನ್‌ಸ್ಟಿಟ್ಯೂಟ್ ಆಫ್ ಆರ್ಟ್ಸ್ ಅಂಡ್ ಆರ್ಕಿಟೆಕ್ಚರ್, ವಿಜಯಪುರ

## ಬಿಎಲ್ ಓ ಗಳಿಗೆ ಅಗತ್ಯ ದಾಖಲೆ ಹಾಗೂ ಸಹಕಾರ ನೀಡಿ

❑ ನೈಜ್ಯ ದೆಸೆ ನ್ಯೂಸ್

**ತಾಳಿಕೋಟಿ: ನಿಮ್ಮ ಮನೆಗೆ ಆಗಮಿಸುವ ಬಿ ಎಲ್ ಓ ಅಧಿಕಾರಿಗಳಿಗೆ ಅಗತ್ಯ ದಾಖಲೆಗಳನ್ನು ಒದಗಿಸಿ ಅವರಿಗೆ ಸಂಪೂರ್ಣ ಸಹಕಾರ ನೀಡಿ ಎಂದು ಭಾಜಪ ಮುಖಂಡ ಮಾನಸಿಂಗ್ ಕೊಕಟನೂರ ಹೇಳಿದರು.**




ಪಟ್ಟಣದ ಅನಂತಪುರಪೇಟ ಬೂತ್ ಸಂಖ್ಯೆ 27ರಲ್ಲಿ ಬಿ ಎಲ್ ಓ ಅಧಿಕಾರಿಗಳ ಜೊತೆ ಮತದಾರರ ಮನೆ ಮನೆಗೆ ತೆರಳಿ ಮಾಹಿತಿ ನೀಡಿ ಅವರು ಗುರುವಾರ ಮಾತನಾಡಿದರು. ರಾಜ್ಯಾದ್ಯಂತ ಜೂನ್ 30 ರಿಂದ ಜುಲೈ 29 ರವರೆಗೆ ಮತದಾರರ ಪಟ್ಟಿಯ ವಿಶೇಷ ಸಮಗ್ರ ಪರಿಷ್ಕರಣೆ ಅಂಗವಾಗಿ ಮನೆ ಮನೆ ಸಮೀಕ್ಷೆ ನಡೆಯುತ್ತಿದೆ ಪ್ರತಿ ಬೂತ್ ಗೆ ನಿಯುಕ್ತರಾದ ಬೂತ್ ಮಟ್ಟದ ಅಧಿಕಾರಿ (ಬಿ ಎಲ್ ಓ) ಗಳಿಗೆ ಅಗತ್ಯ ದಾಖಲೆ ಹಾಗೂ ಮಾಹಿತಿಯನ್ನು ಸಲ್ಲಿಸಿ ಮತದಾರರ ಪಟ್ಟಿಯ ಪರಿಷ್ಕರಣೆ ಪ್ರಕ್ರಿಯೆಯಲ್ಲಿ ಮತದಾರರ ಪಟ್ಟಿಯಲ್ಲಿ ನಿಮ್ಮ ಹೆಸರು ಹಾಗೂ ವಿವರಗಳು ನಿಖರವಾಗಿ ದಾಖಲಾಗಿರುವದನ್ನು ಖಚಿತಪಡಿಸಿಕೊಳ್ಳಬೇಕು. ಬಲಿಷ್ಠ ಪ್ರಜಾಪ್ರಭುತ್ವದ ಅಡಿಪಾಯ ನಿಖರ ಮತದಾರರ ಪಟ್ಟಿಯಲ್ಲಿದೆ. ಆದ್ದರಿಂದ ಈ ವಿಶೇಷ ಸಮಗ್ರ ಪರಿಷ್ಕರಣೆ ಪ್ರಕ್ರಿಯೆಯಲ್ಲಿ ಪ್ರತಿಯೊಬ್ಬರೂ ಸಕ್ರಿಯವಾಗಿ ಭಾಗವಹಿಸಿ ಯಶಸ್ವಿಗೊಳಿಸೋಣ ಎಂದರು.

ನೈಜ್ಯ ದೆಸೆ
ಕನ್ನಡ ದಿನಪತ್ರಿಕೆಯನ್ನು ತಪ್ಪದೆ ಓದಿರಿ.

# ಕಾರುಣ್ಯ ಮಾತೆ ದಿ. ಲಕ್ಷ್ಮೀ ದೇವಿ ಭಂಗಿ ಅವರ ಪುಣ್ಯಾರಾಧನೆ ಕಾರ್ಯಕ್ರಮ

❑ ನೈಜ್ಯ ದೆಸೆ ನ್ಯೂಸ್




ಸಿಂಧನೂರು: ಕಾರುಣ್ಯ ಕುಟುಂಬದ ಹುಟ್ಟಿಗೆ ಮೂಲ ಕಾರಣೀಕರ್ತರಾದ ಕಾರುಣ್ಯ ಆಶ್ರಮದ ಸಲಹಾ ಸಮಿತಿಯ ಹಿರಿಯರಾದ ವೆಂಕಟೇಶ್ವರ ಪ್ರಿಂಟಿಂಗ್ ಪ್ರೆಸ್ ಮಾಲೀಕರಾದ ಮಂಜುನಾಥ ಭಂಗಿ ಅವರ ಮಾತೋಶ್ರೀಯವರಾದ ದಿ. ಲಕ್ಷ್ಮಿ ದೇವಿ ಅವರ 6ನೇ ವರ್ಷದ ಪುಣ್ಯರಾಧನೆ ಕಾರ್ಯಕ್ರಮವು ನಗರದ ಕಾರುಣ್ಯ ನೆಲೆ ವೃದ್ಧಾಶ್ರಮ ಹಾಗೂ ವಯಸ್ಕರ ಬುದ್ಧಿಮಾಂದ್ಯ ಆಶ್ರಮದಲ್ಲಿ ಅರ್ಥಪೂರ್ಣವಾಗಿ ನೆರವೇರಿತು.

ಈ ಕಾರ್ಯಕ್ರಮದಲ್ಲಿ ದಿ.ಲಕ್ಷ್ಮಿ ದೇವಿ ಅಮ್ಮನವರ ಭಾವಚಿತ್ರಕ್ಕೆ ವಿಶೇಷ ಪೂಜೆ ಸಲ್ಲಿಸುವುದರ ಮೂಲಕ ಆಶ್ರಯದಾತರುಗಳು ಪ್ರಾರ್ಥನೆ ಸಲ್ಲಿಸಿದರು. ಈ ಕಾರ್ಯಕ್ರಮದಲ್ಲಿ ರಮೇಶ ಭಂಗಿ ಅವರನ್ನು ಆಶ್ರಮದ ವತಿಯಿಂದ ಗೌರವಿಸಿ ಆಶೀರ್ವಸಲಾಯಿತು. ನಂತರ ಆಶ್ರಮದ ಕಾರ್ಯಾಅಧ್ಯಕ್ಷರಾದ ಡಾ. ಚನ್ನಬಸವ ಸ್ವಾಮಿ ಹಿರೇಮಠ ಮಾತನಾಡಿ ಸುಮಾರು ವರ್ಷಗಳ ಹಿಂದೆ ನಾನು ಹಾಗೂ ಮಂಜುನಾಥ ಭಂಗಿ ಅವರು ಸಿಂಧನೂರಿನಲ್ಲಿ ಅನಾಥರಿಗಾಗಿ ಆಶ್ರಯ ಕಲ್ಪಿಸಬೇಕು ಎನ್ನುವ ಉದ್ದೇಶವನ್ನಿಟ್ಟುಕೊಂಡು ನನ್ನ ತಂದೆಯವರಾದ ಹರೇಟನೂರು ಗ್ರಾಮದ ಆದಿಶಕ್ತಿ ಶ್ರೀ ವಿದ್ಯಾವಮ್ಮ ದೇವಿಯ ಅರ್ಚಕರಾದ ವೇ.ಮೂ. ಅಮರಯ್ಯ ಸ್ವಾಮಿ ಹಿರೇಮಠ ಅವರ ನೇತೃತ್ವದಲ್ಲಿ ಕಾರುಣ್ಯ ಆಶ್ರಮವನ್ನು ಹುಟ್ಟು ಹಾಕಲಾಯಿತು ಆದರೆ ಈ ಸಂಸ್ಥೆಯು ಶಾಶ್ವತವಾಗಿ ನಾಡಿನಲ್ಲಿ ಹಲವಾರು ಅಂಧ-ಅನಾಥರ ಬದುಕಿಗೆ ದಾನಿಗಳು ತಮ್ಮ ಸಹಾಯ ಸಹಕಾರದ ಮೂಲಕ ಸುಂದರ ಅರಮನೆಯನ್ನಾಗಿ ಮಾಡಿದ್ದಾರೆ.

ಸಿಂಧನೂರಿನ ಭಂಗಿ ಕುಟುಂಬದ ಸೇವೆ ಕಾರುಣ್ಯಾಶ್ರಮಕ್ಕೆ ಅಪಾರವಾಗಿದೆ. ಈ ಆಶ್ರಮದ ಹುಟ್ಟಿನ ಪ್ರಥಮ ಹಂತದಲ್ಲಿ ಮಾಡಿರುವ ಲಕ್ಷ್ಮಿ ದೇವಿ ಅಮ್ಮನವರ ಸಹಾಯ ಯಾವತ್ತಿಗೂ ಮರೆಯುವುದಿಲ್ಲ. ಕಾರುಣ್ಯ ಕುಟುಂಬ ಲಕ್ಷ್ಮಿ ದೇವಿ ಅಮ್ಮನವರನ್ನು ಕೃತಜ್ಞತಾ ಭಾವನೆಯಿಂದ ದಿನಾಲು ಕೂಡ ಪೂಜಿಸುತ್ತಿದೆ. ಯಾವುದೇ ಒಬ್ಬ ಮನುಷ್ಯನ ಹತ್ತಿರ ಕೃತಜ್ಞತಾ ಭಾವನೆ ಇಲ್ಲದಿದ್ದರೆ ಅವನು ಮನುಷ್ಯನೇ ಅಲ್ಲ ಎನ್ನುವುದು ನನ್ನ ವಯಕ್ತಿಕ ಅಭಿಪ್ರಾಯ ನಾನು ಹಾಗೂ ಮಂಜುನಾಥ ಭಂಗಿ ಕಾರುಣ್ಯಾಶ್ರಮವನ್ನು ಹುಟ್ಟು ಹಾಕಿದ್ದು ಸಮಾಜ ಗೌರವಿಸುತ್ತಿದೆ. ಈ ಆತ್ಮಕ್ಕೆ ಸಹಾಯ ಸಹಕಾರ ಮಾಡುವ ದಾನಿಗಳೇ ಕಾರುಣ್ಯ ಕುಟುಂಬದ ಯಜಮಾನರುಗಳು ನಮ್ಮನ್ನೆಲ್ಲಾ ಅಗಲಿದ ಕಾರುಣ್ಯ ಮಾತೆಗೆ ಆ ಭಗವಂತ ನಿರಂತರ ಆತ್ಮ ಶಾಂತಿಯನ್ನು ಕರುಣಿಸಲಿ ಭಂಗಿ ಕುಟುಂಬಕ್ಕೆ ಹಾಗೂ ನಮ್ಮ ಕಾರುಣ್ಯ ಕುಟುಂಬಕ್ಕೆ ಈ ತಾಯಿಯಾಗಲಿಕೆಯ ನೋವು ಭರಿಸುವಂತಹ ಶಕ್ತಿಯನ್ನು ಕರುಣಿಸಲಿ ಎಂದು ಪ್ರಾರ್ಥನೆಯ ಮೂಲಕ ಇಂದು ಆಶ್ರಮದಲ್ಲಿ ಪ್ರಾರ್ಥಿಸಿಕೊಳ್ಳಲಾಗಿದೆ ಎಂದು ಭಾವನಾತ್ಮಕವಾಗಿ ಮಾತನಾಡಿ ಭಾವಪೂರ್ಣ ಶ್ರದ್ಧಾಂಜಲಿ ಸಲ್ಲಿಸಿದರು. ಈ ಕಾರ್ಯಕ್ರಮದಲ್ಲಿ ರಮೇಶ ಭಂಗಿ. ಬೀರಪ್ಪ ಚೌಳೆಕಾಯಿ ಟರಾಜೇಶ ಗುತ್ತೇದಾರ ತುರ್ವಿಹಾಳ. ಪ್ರವೀಣ್ ಕುಮಾರ್ ಗುತ್ತೇದಾರ ಪ್ರವೀಣ್ ಕುಮಾರ್ ಗುತ್ತೇದಾರ ಕುರುಕುಂದ. ಸಚಿನ್. ಹನುಮಂತಪ್ಪ. ಮೂಕಯ್ಯ.ವಿರೂಪಾಕ್ಷಿ. ಹನುಮಂತಪ್ಪ ನಿವೃತ್ತ ಎ. ಎಸ್. ಐ. ಗಳು ಮಸ್ಕಿ ಹಾಗೂ ಆಶ್ರಮದ ಸದಸ್ಯರಾದ ಸುಜಾತ ಹಿರೇಮಠ. ಆಶ್ರಮದ ಸಿಬ್ಬಂದಿಗಳಾದ ಸುಜಾತ ಮಲದಗುಡ್ಡ. ಸಿದ್ದಯ್ಯ ಸ್ವಾಮಿ. ಮರಿಯಪ್ಪ. ಜ್ಯೋತಿ. ಮತ್ತು ಸುಕಾಲಪೇಟೆಯ ಭಂಗಿ ಕುಟುಂಬದ ಅಪಾರ ಸದಸ್ಯರು ಭಾಗವಹಿಸಿದ್ದರು.

# ಪೂರ್ವ ಪ್ರಾಥಮಿಕ ಶಾಲೆ ಸದುಪಯೋಗ ಮಾಡಿಕೊಳ್ಳಿ: ದಮ್ಮೂರಮಠ




❑ ನೈಜ್ಯ ದೆಸೆ ನ್ಯೂಸ್

**ತಾಳಿಕೋಟೆ: 2026-27 ನೇ ಸಾಲಿನ ಶೈಕ್ಷಣಿಕ ವರ್ಷದಲ್ಲಿ ಈ ಶಾಲೆಯಲ್ಲಿ ಪೂರ್ವ ಪ್ರಾಥಮಿಕ (ಎಲ್ಕೆಜಿ ಯುಕೆಜಿ) ಆಂಗ್ಲ ಮಾಧ್ಯಮದಲ್ಲಿ ಆರಂಭಿಸಲಾಗಿದೆ. ಇದರ ಸದುಪಯೋಗವನ್ನು ಮಾಡಿಕೊಳ್ಳಿ ಎಂದು ಕ್ಷೇತ್ರ ಸಮನ್ವಯಾಧಿಕಾರಿ ಆರ್ ಬಿ ದಮ್ಮೂರಮಠ ಹೇಳಿದರು.**

ಅವರು ತಾಲ್ಲೂಕಿನ ಶಿವಪುರ ಗ್ರಾಮದ ಸರ್ಕಾರಿ ಮಾದರಿ ಪ್ರಾಥಮಿಕ ಶಾಲೆಯಲ್ಲಿ ಕ್ಷೇತ್ರ ಶಿಕ್ಷಣಾಧಿಕಾರಿಗಳು, ಕ್ಷೇತ್ರ ಸಮನ್ವಯಾಧಿಕಾರಿಗಳ ಕಾರ್ಯಾಲಯ ಮುದ್ದೇಬಿಹಾಳ ಹಾಗೂ ಸರ್ಕಾರಿ ಉನ್ನತೀಕರಿಸಿದ ಪ್ರೌಢಶಾಲೆ ಶಿವಪುರ ಇವರ ಸಹಯೋಗದಲ್ಲಿ ಹಮ್ಮಿಕೊಂಡ ಇಂಗ್ಲೀಷ್ ಮಾಧ್ಯಮದ ಎಲ್.ಕೆ.ಜಿ. ಯುಕೆಜಿ ನೂತನ ವಿಭಾಗದ ಆರಂಭೋತ್ಸವ ಕಾರ್ಯಕ್ರಮ ಉದ್ಘಾಟಿಸಿ ಗುರುವಾರ ಅವರು ಮಾತನಾಡಿದರು. ಖಾಸಗಿ ಶಾಲೆಯಲ್ಲಿ ಹೆಚ್ಚಿನ ದುಡ್ಡು ಕೊಟ್ಟು ಮಕ್ಕಳಿಗೆ ಶಿಕ್ಷಣ ಕೊಡಿಸಲು ಎಲ್ಲರಿಗೂ ಸಾಧ್ಯವಾಗುವುದಿಲ್ಲ.

ಅಂತವರಿಗೆ ಒಳ್ಳೆಯ ಗುಣಮಟ್ಟದ ಶಿಕ್ಷಣ ನೀಡುವ ಈ ಸರ್ಕಾರಿ ಶಾಲೆಗಳು ಹೆಚ್ಚು ಅನುಕೂಲವಾಗುತ್ತವೆ ಎಂದರು. ಮುಖ್ಯ ಶಿಕ್ಷಕಿ ಆರ್.ಬಿ.ಆಲೂರ ಮಾತನಾಡಿ ನೂತನವಾಗಿ ಆರಂಭಿಸಲಾಗಿರುವ ಆಂಗ್ಲ ಮಾಧ್ಯಮದ ಈ ಪೂರ್ವ ಪ್ರಾಥಮಿಕ ಶಾಲೆಯಲ್ಲಿ ಉತ್ತಮ ಭೋದಕರು, ಗುಣಮಟ್ಟದ ಶಿಕ್ಷಣ, ಉಚಿತ ಸೌಲಭ್ಯಗಳ ಜೊತೆಗೆ ಲ್ಯಾಬಿನ ಸವಲತ್ತೂ ಇರುವುದು ಪಾಲಕರು ಇದರ ಸದುಪಯೋಗವನ್ನು ಮಾಡಿಕೊಳ್ಳಿ ಎಂದ ಅವರು ಈಗಾಗಲೇ ನಮ್ಮ ಶಾಲೆಯಲ್ಲಿ ಎಲ್ಕೆಜಿಗೆ 25 ಹಾಗೂ ಯುಕೆಜಿಗೆ 15 ಹೀಗೆ ಒಟ್ಟು 40 ಮಕ್ಕಳು ದಾಖಲಾತಿ ಪಡೆದುಕೊಂಡಿದ್ದಾರೆ ಎಂದರು. ಎಸ್ ಡಿ ಎಂ ಸಿ ಅಧ್ಯಕ್ಷ ಚಂದ್ರಶೇಖರ ಮುರಾಳ ಅಧ್ಯಕ್ಷತೆ ವಹಿಸಿದ್ದರು.

ಕಾರ್ಯಕ್ರಮದಲ್ಲಿ ಬಿ ಆರ್ ಪಿ ಶ್ರೀಮತಿ ಎಸ್ ಬಿ ಹುನಗುಂದ, ಕಾಶಿನಾಥ ಸಜ್ಜನ, ಸಿಆರ್‌ಪಿ ಬಿ.ಎ.ವಿಜಾಪುರ, ಕೆಎಸ್ಪಿಎಸ್‌ಟಿಎ ಅಧ್ಯಕ್ಷ ಬಿ.ಟಿ.ವಜ್ಜಲ್, ಉಪಾಧ್ಯಕ್ಷ ಟಿ.ಎಸ್.ಲಮಾಣಿ, ಪ್ರಧಾನ ಕಾರ್ಯದರ್ಶಿ ಎಸ್.ಬಿ.ಬೀರಗೊಂಡ, ಖಜಾಂಚಿ ಆರ್ ಎಸ್ ಹಿಪ್ಪರಗಿ, ಶಿಕ್ಷಕ ಎಸ್ ಆರ್ ವಾಲಿಕಾರ, ಪಿ ವೈ ಮೇಟಿ ಶಿಕ್ಷಕಿಯರಾದ ಎಲ್.ಎ.ವಿಜಾಪುರ, ಎಸ್.ಜಿ. ಸಕ್ರಿ,ಆರ್.ಎಂ.ನದಾಫ, ಶಿಕ್ಷಕ ಅಮರ್ ಎಸ್, ಬಸವರಾಜ ಚಲವಾದಿ, ನಿಂಗರಾಜ ಬಡಿಗೇರ, ಹಳ್ಳಿರಾಮ ಗೊಂದಳಿ, ಶ್ರೀಮತಿ ಬಿ ಬಿ ಕುಂಟೋಜಿ, ಅತಿಥಿ ಶಿಕ್ಷಕರು, ಪಾಲಕರು ಹಾಗೂ ವಿದ್ಯಾರ್ಥಿಗಳು ಇದ್ದರು.

# ರಾಷ್ಟ್ರೀಯ ವೈದ್ಯರ ದಿನಾಚರಣೆ : ಖ್ಯಾತ ಸ್ತ್ರೀರೋಗ ತಜ್ಞ ಡಾ. ನಾಗರಾಜ್ ಕಾಟ್ವ ಅವರಿಗೆ ಸನ್ ರೈಸ್ ಸ್ಕೂಲ್ ಆಫ್ ನರ್ಸಿಂಗ್ ವತಿಯಿಂದ ಸನ್ಮಾನ

❑ ನೈಜ್ಯ ದೆಸೆ ನ್ಯೂಸ್



**ತುರ್ವಿಹಾಳ: ರಾಷ್ಟ್ರೀಯ ವೈದ್ಯರ ದಿನಾಚರಣೆ ಅಂಗವಾಗಿ ಸನ್ ರೈಸ್ ಸ್ಕೂಲ್ ಆಫ್ ನರ್ಸಿಂಗ್, ಸಿಂಧನೂರು ವತಿಯಿಂದ ಸಮುದಾಯ ಆರೋಗ್ಯ ಕೇಂದ್ರ, ತುರ್ವಿಹಾಳದಲ್ಲಿ ಸೇವೆ ಸಲ್ಲಿಸುತ್ತಿರುವ ಖ್ಯಾತ ಸ್ತ್ರೀರೋಗ ತಜ್ಞ ಡಾ. ನಾಗರಾಜ್ ಕಾಟ್ವ ಅವರನ್ನು ಆತ್ಮೀಯವಾಗಿ ಸನ್ಮಾನಿಸಿ ಗೌರವ ಸಮರ್ಪಣೆ ಮಾಡಲಾಯಿತು.**

ದೀರ್ಘಕಾಲ ಸಿಂಧನೂರಿನ ತಾಯಿ ಮತ್ತು ಮಕ್ಕಳ ಆಸ್ಪತ್ರೆ ಹಾಗೂ ಸಾರ್ವಜನಿಕ ಆಸ್ಪತ್ರೆಯಲ್ಲಿ ಸೇವೆ ಸಲ್ಲಿಸಿರುವ ಡಾ. ನಾಗರಾಜ್ ಕಾಟ್ವ ಅವರು ಸಾವಿರಾರು ತಾಯಂದಿರು ಮತ್ತು ನವಜಾತ ಶಿಶುಗಳ ಆರೋಗ್ಯ ರಕ್ಷಣೆಯಲ್ಲಿ ಮಹತ್ತರ ಕೊಡುಗೆ ನೀಡಿದ್ದಾರೆ. ತಮ್ಮ ಸೇವಾ ಅವಧಿಯಲ್ಲಿ ಬಡ ಮತ್ತು ದುರ್ಬಲ ವರ್ಗದ ರೋಗಿಗಳಿಗೆ ಆತ್ಮೀಯತೆ, ಕಾಳಜಿ ಮತ್ತು ಮಾನವೀಯತೆಯಿಂದ ಚಿಕಿತ್ಸೆ ನೀಡಿ ಅನೇಕರ ಪಾಲಿಗೆ ಆಶಾಕಿರಣವಾಗಿ ಹೊರಹೊಮ್ಮಿದ್ದಾರೆ.

ಪ್ರಸ್ತುತ ಸಮುದಾಯ ಆರೋಗ್ಯ ಕೇಂದ್ರ, ತುರ್ವಿಹಾಳದಲ್ಲಿ ಸೇವೆ ಸಲ್ಲಿಸುತ್ತಿರುವ ಅವರು ಗ್ರಾಮೀಣ ಭಾಗದ ಬಡ ಹಾಗೂ ಅಗತ್ಯವಿರುವ ರೋಗಿಗಳಿಗೆ ಗುಣಮಟ್ಟದ ಆರೋಗ್ಯ ಸೇವೆ ಒದಗಿಸುವ ಮೂಲಕ ವೈದ್ಯಕೀಯ ಸೇವೆಯನ್ನು ಜನಸ್ನೇಹಿಯಾಗಿ ಮುಂದುವರಿಸುತ್ತಿದ್ದಾರೆ. ಅವರ ನಿಸ್ವಾರ್ಥ ಸೇವೆ, ಕರ್ತವ್ಯನಿಷ್ಠೆ ಹಾಗೂ ಮಾನವೀಯ ಮೌಲ್ಯಗಳನ್ನು ಗೌರವಿಸುವ ಉದ್ದೇಶದಿಂದ ರಾಷ್ಟ್ರೀಯ ವೈದ್ಯರ ದಿನಾಚರಣೆಯ ಅಂಗವಾಗಿ ಶಾಲು ಹೊದಿಸಿ, ಹಾರ ಹಾಕಿ ವೈದ್ಯರ ದಿನಾಚರಣೆಯ ಶುಭಾಶಯಗಳನ್ನು ತಿಳಿಸಿ ಸನ್ಮಾನಿಸಲಾಯಿತು.

ಈ ಸಂದರ್ಭದಲ್ಲಿ ಮಾತನಾಡಿದ ಸನ್ ರೈಸ್ ಸ್ಕೂಲ್ ಆಫ್ ನರ್ಸಿಂಗ್‌ನ ಪ್ರಾಚಾರ್ಯ ಲಾಜರ್ ಸಿರಿಲ್, "ವೈದ್ಯ ವೃತ್ತಿ ಸಮಾಜದ ಅತ್ಯಂತ ಶ್ರೇಷ್ಠ ಸೇವೆಗಳಲ್ಲಿ ಒಂದಾಗಿದೆ. ಡಾ. ನಾಗರಾಜ್ ಕಾಟ್ವ ಅವರು ತಮ್ಮ ಸೇವಾ ಮನೋಭಾವ, ಸರಳತೆ ಮತ್ತು ರೋಗಿಗಳ ಮೇಲಿನ ಕಾಳಜಿಯಿಂದ ಎಲ್ಲರಿಗೂ ಮಾದರಿಯಾಗಿದ್ದಾರೆ. ಇಂತಹ ಸೇವಾನಿರತ ವೈದ್ಯರನ್ನು ಗೌರವಿಸುವುದು ನಮ್ಮೆಲ್ಲರ ಜವಾಬ್ದಾರಿಯಾಗಿದೆ," ಎಂದು ಹೇಳಿದರು.

ಕಾರ್ಯಕ್ರಮದಲ್ಲಿ ಸನ್ ರೈಸ್ ಸ್ಕೂಲ್ ಆಫ್ ನರ್ಸಿಂಗ್‌ನ ಉಪನ್ಯಾಸಕರು, ವಿದ್ಯಾರ್ಥಿಗಳು ಹಾಗೂ ಆಸ್ಪತ್ರೆಯ ಸಿಬ್ಬಂದಿ ಉಪಸ್ಥಿತರಿದ್ದು, ಡಾ. ನಾಗರಾಜ್ ಕಾಟ್ವ ಅವರಿಗೆ ರಾಷ್ಟ್ರೀಯ ವೈದ್ಯರ ದಿನಾಚರಣೆಯ ಶುಭಾಶಯಗಳನ್ನು ಕೋರಿದರು.

# ದಲಿತಪರ ಸಂಘಟನೆಗಳ ಒಕ್ಕೂಟ ಸಿಂಧನೂರು ವತಿಯಿಂದ ತಹಸೀಲ್ದಾರ್,

## ಸಿಂಧನೂರು ಇವರ ಮುಖಾಂತರ ಮಾನ್ಯ ಮುಖ್ಯಮಂತ್ರಿಗಳು ಹಾಗೂ ಗೃಹ ಮಂತ್ರಿಗಳಿಗೆ ಮನವಿ ಸಲ್ಲಿಕೆ.ದಲಿತರ ಮೇಲಿನ ದೌರ್ಜನ್ಯ ತೆಡೆಗಟ್ಟಲು ಸರ್ಕಾರಕ್ಕೆ ಅಗ್ರಹ ಮೌನೇಶ ಜಾಲವಾಡಗಿ

❑ ನೈಜ್ಯ ದೆಸೆ ನ್ಯೂಸ್

**ಕೊಪ್ಪಳ ಜಿಲ್ಲೆಯ ಬೋಚನಹಳ್ಳಿ, ಲಿಂಗಸುಗೂರು ತಾಲೂಕಿನ ಗೆಜ್ಜಲಗಟ್ಟ, ಮಸ್ಕಿ ತಾಲೂಕಿನ ಎಂ. ರಾಮಲದಿನ್ನಿ ಹಾಗೂ ಸಿಂಧನೂರು ನಗರದಲ್ಲಿ ದಲಿತರ ಮೇಲಿನ ದೌರ್ಜನ್ಯ ಪ್ರಕರಣಗಳಲ್ಲಿ ಸಂತ್ರಸ್ತರಿಗೆ ತಕ್ಷಣ ನ್ಯಾಯ ಒದಗಿಸಿ, ದಲಿತರ ಮೇಲೆ ದಾಖಲಿಸಿರುವ ಸುಳ್ಳು ಪ್ರಕರಣಗಳನ್ನು ಹಿಂಪಡೆದು, ತಪ್ಪಿತಸ್ಥರಿಗೆ ಕಠಿಣ ಶಿಕ್ಷೆ ವಿಧಿಸುವ ಕುರಿತು.**



ಸಂವಿಧಾನ ಜಾರಿಯಾಗಿ 75 ವರ್ಷಗಳಾದರೂ ರಾಜ್ಯದಲ್ಲಿ ದಲಿತರ ಮೇಲೆ ನಡೆಯುತ್ತಿರುವ ಜಾತಿ ದೌರ್ಜನ್ಯ, ಸಾಮಾಜಿಕ ಬಹಿಷ್ಕಾರ, ಹಲ್ಲೆ, ಅವಮಾನ ಮತ್ತು ಸುಳ್ಳು ಪ್ರಕರಣಗಳ ಸರಣಿ ನಿಂತಿಲ್ಲ. ಇದು ಕೇವಲ ಕಾನೂನು ಸುವ್ಯವಸ್ಥೆಯ ವೈಫಲ್ಯವಲ್ಲ; ಸಂವಿಧಾನದ ಆಶಯಗಳ ಮೇಲಿನ ಬಹಿರಂಗ ದಾಳಿಯಾಗಿದೆ.

ಇತ್ತೀಚೆಗೆ ಕೊಪ್ಪಳ ತಾಲೂಕಿನ ಬೋಚನಹಳ್ಳಿ, ಲಿಂಗಸುಗೂರು ತಾಲೂಕಿನ ಗೆಜ್ಜಲಗಟ್ಟ, ಮಸ್ಕಿ ತಾಲೂಕಿನ ಎಂ. ರಾಮಲದಿನ್ನಿ ಹಾಗೂ ಸಿಂಧನೂರು ನಗರದಲ್ಲಿ ನಡೆದ ಘಟನೆಗಳು ರಾಜ್ಯದ ದಲಿತ ಸಮುದಾಯವನ್ನು ತೀವ್ರ ಆತಂಕಕ್ಕೀಡು ಮಾಡಿವೆ. ದೌರ್ಜನ್ಯ ಎಸಗಿದವರ ವಿರುದ್ಧ ನಿರ್ದಾಕ್ಷಿಣ್ಯ ಕ್ರಮ ಕೈಗೊಳ್ಳುವ ಬದಲು, ಅನೇಕ ಕಡೆಗಳಲ್ಲಿ ದಲಿತರ ಮೇಲೆಯೇ ಸುಳ್ಳು ಪ್ರಕರಣಗಳನ್ನು ದಾಖಲಿಸುವ ಮೂಲಕ ಅನ್ಯಾಯವನ್ನು ಮತ್ತಷ್ಟು ಹೆಚ್ಚಿಸಲಾಗುತ್ತಿದೆ. ಇದರಿಂದ ಸಂತ್ರಸ್ತರಿಗೆ ನ್ಯಾಯ ಸಿಗುವ ಬದಲು ಭಯದ ವಾತಾವರಣ ನಿರ್ಮಾಣವಾಗುತ್ತಿದೆ.

ಸಂವಿಧಾನ ಎಲ್ಲರಿಗೂ ಸಮಾನ ಹಕ್ಕುಗಳನ್ನು ನೀಡಿದೆ. ಆದರೆ ದಲಿತರು ತಮ್ಮ ಹಕ್ಕು ಕೇಳಿದರೆ ಹಲ್ಲೆ, ಸುಳ್ಳು ಪ್ರಕರಣ, ಬೆದರಿಕೆ ಮತ್ತು ಅವಮಾನ ಎದುರಿಸಬೇಕಾಗಿರುವುದು ಅತ್ಯಂತ ಖಂಡನೀಯ. ಇದು ಪ್ರಜಾಪ್ರಭುತ್ವಕ್ಕೆ ಕಪ್ಪು ಚುಕ್ಕೆ.

ಆದ್ದರಿಂದ ಕರ್ನಾಟಕ ಸರ್ಕಾರವು ಈ ಪ್ರಕರಣಗಳನ್ನು ಅತ್ಯಂತ ಗಂಭೀರವಾಗಿ ಪರಿಗಣಿಸಿ ತಕ್ಷಣ ಈ ಕೆಳಕಂಡ ಕ್ರಮಗಳನ್ನು ಕೈಗೊಳ್ಳಬೇಕೆಂದು ನಾವು ಬಲವಾಗಿ ಆಗ್ರಹಿಸುತ್ತೇವೆ.

ದಲಿತರು ನ್ಯಾಯ ಕೇಳುವುದು ಅಪರಾಧವಲ್ಲ; ಅದು ಸಂವಿಧಾನ ನೀಡಿರುವ ಹಕ್ಕು. ಆ ಹಕ್ಕನ್ನು ಹತ್ತಿಕ್ಕುವ ಯಾವುದೇ ಶಕ್ತಿಯನ್ನು ಸರ್ಕಾರ ಸಹಿಸಬಾರದು. ಈ ಮನವಿಗೆ ತಕ್ಷಣ ಸ್ಪಂದಿಸಿ ನ್ಯಾಯ ಒದಗಿಸದಿದ್ದರೆ ರಾಜ್ಯಾದ್ಯಂತ ದಲಿತರು, ಪ್ರಗತಿಪರರು ಹಾಗೂ ಜನಪರ ಸಂಘಟನೆಗಳೊಂದಿಗೆ ಉಗ್ರ ಪ್ರಜಾಪ್ರಭುತ್ವ ಹೋರಾಟಗಳನ್ನು ಹಮ್ಮಿಕೊಳ್ಳಬೇಕಾಗುತ್ತದೆ. ಅದರ ಸಂಪೂರ್ಣ ಹೊಣೆ ರಾಜ್ಯ ಸರ್ಕಾರವೇ ಹೊರಬೇಕಾಗುತ್ತದೆ ಎಂದು ಸಂಘಟನೆ ಮುಖಂಡರು ಆಕ್ರೋಶ ವ್ಯಕ್ತಪಡಿಸಿದರು. ಈ ಸಂದರ್ಭದಲ್ಲಿ ಮೌನೇಶ ಜಾಲವಾಡಗಿ, ಹನುಮಂತಪ್ಪ ಗೊಮರ್ಶಿ, ಮರಿಯಪ್ಪ ಬಿಎಸ್‌ಪಿ, ನರಸಪ್ಪ ಕಟ್ಟಿಮನಿ,ಶಿವರಾಜ ಉಪ್ಪಲದೊಡ್ಡಿ, ನಿರುಪಾದಿ ಸಾಸಲಮರಿ, ಮತ್ತು ಸಾಗರ, ಉಮೇಶ ಸುಕಲ್ಪೇಟೆ, ಬಸವರಾಜ್ ಬಾದರ್ಲಿ ಮಾತನಾಡಿದರು.

ಇದೇ ಸಂದರ್ಭದಲ್ಲಿ ಮುಖಂಡರಾದ ವೆಂಕಟೇಶ್ ಗಿರಿ ಜಾಲಿ, ಆಲಂಬಷ ಮಾದಿಗ, ಈರಣ್ಣ ಸುಲ್ತಾನಾಪುರ, ಹನುಮೇಶ ಮೈತ್ರಿ, ಪಂಪಾಪತಿ ಹಂಚಿನಾಳ, ಸುರೇಶ ಎಲೆಕೂಡ್ಲಿಗಿ, ಜಂಬಣ್ಣ ಉಪ್ಪಲದೊಡ್ಡಿ, ರಮೇಶ ಶ್ರೀನಿವಾಸ ಕ್ಯಾಂಪ್,ಹುಸೇನಪ್ಪ ವಿರುಪಾಪುರ, ಮುದಿಯಪ್ಪ ಹೊಸಳ್ಳಿ, ಎಚ್ ಆರ್ ಹೊಸಮನಿ, ಮಾಬುಸಾಬ್ ಬೆಳ್ಳಟ್ಟಿ, ಯಮನೂರ ಬಸಾಪುರ, ಹುಲುಗಪ್ಪ ಜಾಲಿಹಾಳ, ಮಲ್ಲಿಕಾರ್ಜುನ್ ಯಾಪಲಪರ್ವಿ, ಛತ್ರಪ್ಪ ಬಸಾಪುರ, ಶಂಕರ್ ವಿರುಪಾಪುರ, ಉಮೇಶ ಮುಳ್ಳೂರು, ರಾಮಣ್ಣ ತುರುವಿಹಾಳ, ದರಗಯ್ಯ, ಎರ್ರಿಸ್ವಾಮಿ ರೌಡ್ಕುಂದ ಸೇರಿದಂತೆ ಮುಖಂಡರು ಭಾಗವಹಿಸಿದ್ದರು.

### ನಮ್ಮ ಪ್ರಮುಖ ಆಗ್ರಹಗಳು:

1. ಬೋಚನಹಳ್ಳಿ, ಗೆಜ್ಜಲಗಟ್ಟ, ಎಂ. ರಾಮಲದಿನ್ನಿ ಹಾಗೂ ಸಿಂಧನೂರಿನಲ್ಲಿ ನಡೆದ ಎಲ್ಲಾ ದಲಿತ ದೌರ್ಜನ್ಯ ಪ್ರಕರಣಗಳ ನಿಷ್ಪಕ್ಷಪಾತ ಹಾಗೂ ತ್ವರಿತ ತನಿಖೆ ನಡೆಸಬೇಕು.
2. ತಪ್ಪಿತಸ್ಥರನ್ನು ತಕ್ಷಣ ಬಂಧಿಸಿ, ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ (ದೌರ್ಜನ್ಯ ತಡೆ) ಕಾಯ್ದೆ ಸೇರಿದಂತೆ ಅನ್ವಯಿಸುವ ಕಾನೂನುಗಳಡಿ ಕಠಿಣ ಶಿಕ್ಷೆಗೆ ಒಳಪಡಿಸಬೇಕು.
3. ದಲಿತರ ಮೇಲೆ ದುರುದ್ದೇಶಪೂರ್ವಕವಾಗಿ ದಾಖಲಿಸಿರುವ ಎಲ್ಲಾ ಸುಳ್ಳು ಪ್ರಕರಣಗಳನ್ನು ಕೂಡಲೇ ಹಿಂಪಡೆಯಬೇಕು.
4. ಸಂತ್ರಸ್ತ ಕುಟುಂಬಗಳಿಗೆ ಸರ್ಕಾರದ ನಿಯಮಾನುಸಾರ ಸಂಪೂರ್ಣ ಪರಿಹಾರ, ರಕ್ಷಣೆ ಹಾಗೂ ಪುನರ್ವಸತಿ ಒದಗಿಸಬೇಕು.
5. ದಲಿತರ ಮೇಲಿನ ಜಾತಿ ದೌರ್ಜನ್ಯಗಳನ್ನು ತಡೆಯಲು ಜಿಲ್ಲಾಡಳಿತ ಹಾಗೂ ಪೊಲೀಸ್ ಇಲಾಖೆಗೆ ಕಟ್ಟುನಿಟ್ಟಿನ ನಿರ್ದೇಶನ ನೀಡಬೇಕು.
6. ಇಂತಹ ಘಟನೆಗಳು ಮರುಕಳಿಸದಂತೆ ರಾಜ್ಯ ಮಟ್ಟದಲ್ಲಿ ವಿಶೇಷ ನಿಗಾ ವ್ಯವಸ್ಥೆ ರೂಪಿಸಿ, ಜಾತಿ ದೌರ್ಜನ್ಯ ಎಸಗುವವರ ವಿರುದ್ಧ ಶೂನ್ಯ ಸಹಿಷ್ಣುತೆಯ ನೀತಿ ಅನುಸರಿಸಬೇಕು.

OWNER, PUBLISHER, PRINTER BY IRFAN K H NO. 3/117, BALAGANUR, SINDHANOOR, RAICHUR-584138 KARNATAKA AND PRINTED AT SHIVANI PRINTERS, HULKOTI, NEW COURT, OPPOSITE PLOT NO. 28 RS NO. 312/3B, GARAG COMPLEX, GADAG-582101